ಸಂಪುಟ 01 | ಸಂಚಿಕೆ 208 ಶುಕ್ರವಾರ 02 ಅಕ್ಟೋಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ಗಾಂಧಿ ಜಯಂತಿ (Gandhi Jayanti)
ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮದಿನ. ಪ್ರತಿವರ್ಷ ಅಕ್ಟೋಬರ್ 2ರಂದು ಆಚರಿಸಲಾಗುತ್ತದೆ. ಇದು ಭಾರತದಲ್ಲಿ ರಾಷ್ಟ್ರೀಯ ರಜಾದಿನವಾಗಿದೆ.

2. ಅಂತರರಾಷ್ಟ್ರೀಯ ಅಹಿಂಸಾ ದಿನ (International Day of Non-Violence) ವಿಶ್ವಸಂಸ್ಥೆಯು ಮಹಾತ್ಮ ಗಾಂಧೀಜಿಯವರ ಜನ್ಮದಿನವಾದ ಅಕ್ಟೋಬರ್ 2 ಅನ್ನು ಅಂತರರಾಷ್ಟ್ರೀಯ ಅಹಿಂಸಾ ದಿನವಾಗಿ ಆಚರಿಸುತ್ತದೆ.

3. ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ
ಭಾರತದ ಮಾಜಿ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನವೂ ಅಕ್ಟೋಬರ್ 2. ಅವರ ಸರಳತೆ, ಪ್ರಾಮಾಣಿಕತೆ ಮತ್ತು ದೇಶಸೇವೆಯನ್ನು ಈ ದಿನ ಸ್ಮರಿಸಲಾಗುತ್ತದೆ.

ಸುಭಾಷಿತ

ಪ್ರತಿಭೆಗೆ ಶಾಸ್ತ್ರಜ್ಞಾನವಿದ್ದರೆ ವಜ್ರಕ್ಕೆ ಕುಂದಣವಿಟ್ಟಂತೆ.

-ತರಾಸು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ನಿಯಮ ಬಾಹಿರವಾಗಿ ಎಸ್‌ಐಆರ್
ಫಾರಂ-7 ಸಲ್ಲಿಸಿರುವವರ ವಿರುದ್ಧ ಕ್ರಿಮಿನಲ್ ಕೇಸ್

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಎಸ್‌ಐಆರ್ ವಿಚಾರವಾಗಿ ರಾಜ್ಯ ಕಾಂಗ್ರೆಸ್ ಸರ್ಕಾರ ಮತ್ತೂ ಒಂದು ಹೆಜ್ಜೆ ಮುಂದಿಟ್ಟಿದ್ದು, ನಿಯಮ ಬಾಹಿರವಾಗಿ ಫಾರಂ-7 ಸಲ್ಲಿಸಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಎಸ್‌ಐಟಿ ತನಿಖೆ ನಡೆಸಲು ಮುಂದಾಗಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಡಿಯೋ ಮೂಲಕ ನೀಡಿರುವ ಸಂದೇಶದಲ್ಲಿ ರಾಜ್ಯದಲ್ಲಿ ಸುಮಾರು ಒಂದು ಕೋಟಿ ಮತದಾರರನ್ನು ಪಟ್ಟಿಯಿಂದ ಕೈಬಿಡುವ ದೊಡ್ಡ ಹುನ್ನಾರ ನಡೆದಿದೆ. 50 ಲಕ್ಷ ಜನ-ರಿಗೆ ನೋಟೀಸ್ ನೀಡಲಾಗಿದೆ. ಇದರ ಹಿಂದೆ ಬಿಜೆಪಿ ನಾಯಕರ ಗ್ಯಾಂಗ್ ಕೆಲಸ ಮಾಡುತ್ತಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ. ಮುಖ್ಯಮಂತ್ರಿಯಾಗಿ ರಾಜ್ಯದ ಎಲ್ಲರ ಮತದಾನದ ಹಕ್ಕು ರಕ್ಷಣೆ ನನ್ನ ಕರ್ತವ್ಯ. ಆದರೆ ಅದನ್ನು ನಿರ್ವಹಿಸುವಲ್ಲಿ ನಾನು ವಿಫಲವಾಗಿದ್ದೇನೆ ಎಂದು ಡಿ.ಕೆ.ಶಿವಕುಮಾರ್ ಒಪ್ಪಿಕೊಂಡಿದ್ದಾರೆ.



ಬಿಜೆಪಿ ನಾಯಕರು, ಪರಿಶಿಷ್ಟ ಸಮುದಾಯ, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಮತಗಳನ್ನು ಕೈ ಬಿಡಲು ಸಂಚು ನಡೆಸಿದ್ದಾರೆ.

ನಿಯಮ ಬಾಹಿರವಾಗಿ ಫಾರಂ-7 ಅನ್ನು ಬಿಎಲ್‌ಒಗಳು, ಬಿಎಲ್‌ಎ-1 ಮತ್ತು ಬಿಎಲ್‌ಎ-2 ಅವರಿಗೆ? ಸಲ್ಲಿಸಿ ಮತಗಳನ್ನು ತೆಗೆಸಿಹಾಕಲು ಪ್ರಯತ್ನಿಸಿದ್ದಾರೆ. ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ. ಕಾನೂನಿನ ಚೌಕಟ್ಟಿನಲ್ಲಿ ಸಮಗ್ರ ತನಿಖೆಯಾಗಬೇಕು. ಕ್ರಿಮಿನಲ್ ವಿಚಾರಣೆಯಾಗಬೇಕು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಈ ನಿಟ್ಟಿನಲ್ಲಿ ಎಲ್ಲಾ ಬಿಎಲ್‌ಒಗಳು ಮತ್ತು ಬಿಎಲ್‌ಎಗಳು ತಮ ಗೃಹ ಕಚೇರಿ ಕೃಷ್ಣಾಗೆ ಫಾರಂ.ನಂ-7 ಸಲ್ಲಿಸಿರುವವರ ಸಮಗ್ರ ಮಾಹಿತಿ ನೀಡುವಂತೆ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಗಳು, ಚುನಾವಣಾ ಆಯೋಗ ಮತ್ತು ಬಿಎಲ್‌ಒಗಳು, ಈ ನಿಟ್ಟಿನಲ್ಲಿ ಗಮನಹ-ರಿಸಬೇಕು. ಎಸ್‌ಐಆರ್ ಪ್ರಕರಣದಿಂದ ಇಡೀ ರಾಜ್ಯವೇ ತಲ್ಲಣಗೊಂಡಿದೆ ಎಂದು ಹೇಳಿದ್ದಾರೆ.

ಜನರ ಮತದಾನದ ಹಕ್ಕನ್ನು ರಕ್ಷಿಸುವುದು ನಮ ಆದ್ಯ ಕರ್ತವ್ಯ. ಈ ನಿಟ್ಟಿನಲ್ಲಿ ಅಗತ್ಯ ಇರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಚುನಾವಣಾ ಆಯೋಗಕ್ಕೆ ಭೇಟಿ ನೀಡಿ ಸಮಗ್ರ ಮಾಹಿತಿ ನೀಡುವ ಜೊತೆಗೆ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಕಂಡಿರುವ ಕ್ಷೇತ್ರಗಳಲ್ಲೇ ಫಾರಂ.ನಂ.-7 ಅನ್ನು ದುರುಪಯೋಗಪಡಿಸಿಕೊಂಡಿರುವ ವಿಚಾರಗಳು ಬೆಳಕಿಗೆ ಬಂದಿವೆ. ಸಚಿವ ಈಶ್ವರ್ ಖಂಡ್ರೆ ಅವರ ಕ್ಷೇತ್ರ ಭಾಲ್ಕಿ, ನಯನಾ ಮೋಟಮ ಅವರ ಕ್ಷೇತ್ರ ಮೂಡಿಗೆರೆ, ಆಸಿಫ್ ರಾಜು ಸೇಠ್ ಆಯ್ಕೆಯಾಗಿರುವ ಬೆಳಗಾವಿ ಉತ್ತರ, ತನ್ವೀರ್ ಸೇಠ್ ಅವರ ನರಸಿಂಹರಾಜ ಕ್ಷೇತ್ರ ಸೇರಿದಂತೆ ಹಲವು ಕಡೆಗಳಲ್ಲಿ ಅರ್ಜಿ ನಮೂನೆ-7ಅನ್ನು ನಿಯಮಬಾಹಿರವಾಗಿ ನೀಡಿರುವುದು ಕಂಡು ಬಂದಿದೆ.

ನೇರವಾಗಿ ಚುನಾವಣೆಯನ್ನು ಗೆಲ್ಲಲಾಗುವುದಿಲ್ಲ ಎಂಬ ಕಾರಣಕ್ಕೆ ಬಿಜೆಪಿಯ ರಾಷ್ಟ್ರೀಯ ಮತ್ತು ಸ್ಥಳೀಯ ನಾಯಕರು ಈ ರೀತಿ ವಾಮಮಾರ್ಗ ಅನುಸರಿಸಿದ್ದಾರೆ ಎಂದು ಮುಖ್ಯಮಂತ್ರಿ ಆರೋಪಿಸಿದ್ದಾರೆ. ಎಸ್‌ಐಆರ್ ಪ್ರಕ್ರಿಯೆಯಲ್ಲಿನ ಲೋಪಗಳನ್ನು ತನಿಖೆಗೊಳಪಡಿಸುವುದಾಗಿ ಹೇಳಿದ್ದಾರೆ. ಸರ್ಕಾರ ಎಸ್‌ಐಆರ್ ಅಕ್ರಮಗಳ ತನಿಖೆಗೆ ಎಸ್‌ಐಟಿ ರಚಿಸುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಅಂತರ್ಜಲ ಮಟ್ಟ ವಿವರ ಸಂಗ್ರಹಕ್ಕೆ ಸೂಚನೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಮಳೆಯ ಕೊರತೆಯಿಂದ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ 5927 ಪಂಚಾಯತಿಗಳ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟದ ವಿವರವನ್ನು ಸಮರೋಪಾದಿಯಲ್ಲಿ ಸಂಗ್ರಹಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.

ವಿಕಾಸಸೌಧದಲ್ಲಿಂದು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು,



ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳ ಸಂಖ್ಯೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಳ ಆಗುತ್ತಿದೆ. ಬೇಸಿಗೆಯಲ್ಲಿ ಪರಿಸ್ಥಿತಿ ಇನ್ನೂ ಬಿಗಡಾಯಿಸುತ್ತದೆ. ಹೀಗಾಗಿ ಮುಂದಿನ ಮುಂಗಾರಿನವರೆಗೆ ಎದುರಾಗಬಹುದಾದ ಕುಡಿಯುವ ನೀರಿನ ಸಮಸ್ಯೆಯನ್ನು ಅಂ-ದಾಜಿಸಿ, ಸಮರ್ಪಕ ಯೋಜನೆ ರೂಪಿಸಿ ಎಂದು ನಿರ್ದೇಶನ ನೀಡಿದರು.

ಪ್ರಸ್ತುತ ಎಷ್ಟು ಗ್ರಾಮಗಳಿಗೆ ಕೊಳವೆ ಬಾವಿ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ. ಬೇಸಿಗೆಯಲ್ಲಿ ಎಷ್ಟು ಕೊಳವೆ ಬಾವಿಗಳು ಬತ್ತಿಹೋಗುವ ಸಾಧ್ಯತೆ ಇದೆ. ಇಲ್ಲಿ ಪರ್ಯಾಯ ಜಲ ಮೂಲವೇನು. ಮೇಲ್ಮೈ ನೀರಿನ ಲಭ್ಯತೆ ಇದ್ದಲ್ಲಿ ಅಥವಾ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದರೆ ಜಲ ಪೂರೈಕೆಗೆ ಎಷ್ಟು ಟ್ಯಾಂಕರ್ ಗಳನ್ನು ಬಾಡಿಗೆಗೆ ಪಡೆಯಬೇಕಾಗುತ್ತದೆ ಎಂಬ ಸಂಪೂರ್ಣ ಯೋಜನೆ ರೂಪಿಸುವಂತೆ ತಿಳಿಸಿದರು.

ಅಂತರ್ಜಲ ಹಾಗೂ ಮೇಲ್ಮೈ ಜಲ ಎರಡೂ ಲಭ್ಯವಿಲ್ಲದಂತಹ ಸೂಕ್ಷ್ಮ ಪ್ರದೇಶಗಳಿಗೆ ಸಮೀಪದಲ್ಲಿ ಎಲ್ಲಿ ನೀರಿನ ಲಭ್ಯತೆ ಇದೆ. ಅದನ್ನು ಗ್ರಾಮಗಳಿಗೆ ಪೂರೈಸಲು ಏನೆಲ್ಲಾ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಈಗಿನಿಂದಲೇ ಯೋಜನೆ ರೂಪಿಸುವಂತೆ ತಿಳಿಸಿದರು.

ಹಿತಮಿತವಾಗಿ ನೀರು ಬಳಸಲು ಜಾಗೃತಿ ಮೂಡಿಸಿ: ರಾಜ್ಯದ ಬಹುತೇಕ ಕಡೆ ಮಳೆಯ ಕೊರತೆಯಿಂದ ಕುಡಿಯುವ ನೀರಿನ ಸಮಸ್ಯೆ ಇದ್ದು, ಗ್ರಾಮೀಣ ಜನರಿಗೆ, ಕೈಗಾರಿಕೆ, ಶಾಲೆ, ಕಾಲೇಜು, ವಿವಿಧ ಸಂಸ್ಥೆಗಳಿಗೆ ಹಿತಮಿತವಾಗಿ ನೀರು ಬಳಸುವಂತೆ ಜಾಗೃತಿ ಮೂಡಿಸಲು ಈಶ್ವರ ಖಂಡ್ರೆ ಸೂಚಿಸಿದರು.

ವಿಜಯ ಸಂಕಲ್ಪ ಯಾತ್ರೆಗೆ ಬಿವೈವಿ ಚಾಲನೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ನಿನ್ನೆ ಭಾರತ್ ಜೋಡೋ-2 ಯಾತ್ರೆ ಆರಂಭಿಸಿದ ಬೆನ್ನಲ್ಲೆ ಬಿಜೆಪಿಯ ವಿಜಯ ಸಂಕಲ್ಪ ಯಾತ್ರೆ ಇಂದು ಆರಂಭಗೊಂಡಿದೆ.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಕುರುಡುಮಲೆ ಶ್ರೀ ವಿಘ್ನೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಬೂತ್ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ ನೀಡಿದರು. ದೇಶಾದ್ಯಂತ ಬಿಜೆಪಿ ನಡೆಸಿರುವ ಸೇವಾ ಸಂಕಲ್ಪ ಅಭಿಯಾನದ ಭಾಗವಾಗಿ ಬೂತ್ ವಿಜಯ ಸಂಕಲ್ಪ ಯಾತ್ರೆಯನ್ನು ರಾಜ್ಯಾದ್ಯಂತ ನಡೆಸಲಾಗುತ್ತಿದೆ ರಾಜ್ಯದಲ್ಲಿರುವ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವ ಸಂಕಲ್ಪದೊಂದಿಗೆ ಈ ಯಾತ್ರೆಗೆ ಚಾಲನೆ ನೀಡಲಾಗಿದೆ

ಕುರುಡಮಲೈ ವಿಘ್ನೇಶ್ವರ ದೇವಸ್ಥಾನದಿಂದ ಆರಂಭವಾದ ಯಾತ್ರೆ



ಬಂಗಾರಪೇಟೆ ಹಾಗೂ ಕೆಜಿಎಫ್ ವಿಧಾನಸಭಾ ಕ್ಷೇತ್ರಗಳಲ್ಲಿ ಸಾಗಿತು. ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಪ್ರೀತಂಗೌಡ, ನಂದೀಶ್‌ರೆಡ್ಡಿ, ರಾಜ್ಯ ಕಾರ್ಯದರ್ಶಿಗಳಾದ ರಮೇಶ್‌ಗೌಡ, ಅಂಬಿಕಾ ಹುಲಿನಾಯ್ಕರ್, ಕೋಲಾರ ಜಿಲ್ಲಾಧ್ಯಕ್ಷರಾದ ಓಂಶಕ್ತಿ ಚಲಪತಿ, ಮಾಜಿ ಸಂಸದ ಎಸ್. ಮುನಿಸ್ವಾಮಿ, ಮಾಜಿ ಶಾಸಕರಾಜ ವೈ. ಸಂಪಂಗಿ, ಬಿ.ಪಿ. ವೆಂಕಟಮುನಿಯಪ್ಪ, ಕೆ.ಎಸ್. ಮಂಜುನಾಥ್‌ಗೌಡ, ವರ್ತೂರು ಪ್ರಕಾಶ್, ವೈ.ಎ. ನಾರಾಯಣಸ್ವಾಮಿ ಸೇರಿದಂತೆ ಪಕ್ಷದ ಹಲವು ಮುಖಂಡರು, ಕಾರ್ಯಕರ್ತರು ಈ ಯಾತ್ರೆಯಲ್ಲಿ ಭಾಗಿಯಾದರು

ಕೆಪಿಎಸ್‌ಸಿಯನ್ನು ಮುಚ್ಚುವುದೇ ಒಳ್ಳೆಯದು : ಗೃಹ ಸಚಿವ ಪ್ರಿಯಾಂಕ್ ಖರ್ಗೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನಡೆದ ವಿವಿಧ ನೇಮಕಾತಿಗಳಲ್ಲಿನ ಅಕ್ರಮಗಳನ್ನು ಸಿಐಡಿ ಪೊಲೀಸರು ಸಮರ್ಥವಾಗಿ ತನಿಖೆ ನಡೆಸುತ್ತಿದ್ದರೂ, ಅದನ್ನು ಕಸಿದುಕೊಂಡಿದ್ದು ಏಕೆ? ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವರು ಪ್ರಚಾರಕ್ಕಾಗಿ ಹೈಕೋರ್ಟ್ ಮೊರೆ ಹೋಗಿದ್ದರು. ಈಗ ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆ ತನಿಖೆ ಕೈಗೆತ್ತಿಕೊಂಡಿವೆ. ಸಿಐಡಿ ಅಧಿಕಾರಿಗಳು ಪತ್ತೆ ಹಚ್ಚಿದ ಮಾಹಿತಿಗಳನ್ನು ಹೊರತುಪಡಿಸಿ, ಕೇಂದ್ರದ ತನಿಖಾ ಸಂಸ್ಥೆಗಳು ಹೊಸದಾಗಿ ಯಾವ ವಿಚಾರಗಳನ್ನು ಪತ್ತೆ ಹಚ್ಚಿವೆ ಎಂದು ಬಹಿರಂಗ ಪಡಿಸಬೇಕೆಂದು ಸವಾಲು ಹಾಕಿದರು. ಸಕಾರಣ ಇಲ್ಲದೆ ಸಿಐಡಿಯಿಂದ ತನಿಖೆಯನ್ನು ಕಸಿದುಕೊಳ್ಳಲಾಯಿತು. ಇದರ ವಿರುದ್ಧ ರಾಜ್ಯ ಸರ್ಕಾರ



ಸುಪ್ರೀಂಕೋರ್ಟ್‌ಗೆ ಎಸ್‌ಎಲ್‌ಪಿ ಸಲ್ಲಿಸಿದೆ.

ಇಂದು ಅದರ ವಿಚಾರಣೆ ನಡೆಯಲಿದೆ ಎಂದು ಹೇಳಿದರು. ಅಭ್ಯರ್ಥಿಗಳು ಸರ್ಕಾರಿ ನೌಕರಿಗಾಗಿ ಊರಿಂದ ಊರಿಗೆ ಬಂದು ಹಲವಾರು ಅವ್ಯವಸ್ಥೆಗಳನ್ನು ಸಹಿಸಿಕೊಂಡು, ಹಣ-ಕಾಸಿನ ಖರ್ಚಿನ ನಡುವೆ, ಇಡೀ ಕುಟುಂಬದ ಪರದಾಟದ ಜೊತೆಗೆ ಉದ್ಯೋಗಕ್ಕಾಗಿ ಶ್ರಮಿಸುತ್ತಾರೆ. ಇಂತಹ ಸಂದರ್ಭದಲ್ಲಿ ಹುದ್ದೆಗಳನ್ನು ಮಾ-ರಿಕೊಳ್ಳುವವರು ಮನುಷ್ಯರೇ ಅಲ್ಲ. ಈ ಪರಿಸ್ಥಿತಿಯನ್ನು ನೋಡಿದರೆ, ಕೆಪಿ-ಎಸ್‌ಸಿಯನ್ನು ಸಾಂವಿಧಾನಿಕವಾಗಿ ಮುಚ್ಚುವುದೇ ಒಳ್ಳೆಯದು ಎಂದರು.

ಸರ್ಕಾರಿ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇದೆ. 11 ಸಾವಿರ ಪೊಲೀಸ್ ಕಾನ್ಸ್ ಟೇಬಲ್‌ಗಳ ಹುದ್ದೆಗಳನ್ನು ಯಾವುದೇ ಲೋಪಗಳಿಲ್ಲದೇ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಕಳಪೆ ಹೆಲ್ಮೆಟ್‌ಗಳ ಬಳಕೆ ಮತ್ತು ಉತ್ಪಾದನೆಯನ್ನು ಸಂಪೂರ್ಣವಾಗಿ ನಿಷೇಧಿಸುವುದು ಸೇರಿದಂತೆ ನಗರ ಪ್ರದೇಶಗಳಲ್ಲಿ ಸಂಚಾರ ಸುರಕ್ಷತೆಗೆ ಹಲವಾರು ವಿಚಾರಗಳು ಚರ್ಚೆಯಾಗಿವೆ. ಸಾರಿಗೆ ಸಚಿವ ಬೈರತಿ ಸುರೇಶ್ ಮತ್ತು ತಾವು ಸಭೆ ನಡೆಸಿದ್ದು, ನಾಗ-ರಿಕರ ಒಳಿತಿಗೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಎಂದರು. ಹಾಲಿನ ದರ ಹೆಚ್ಚಳಕ್ಕೆ ರೈತರಿಂದ ಬೇಡಿಕೆ ಬಂದಿದೆ. ರೈತರಿಗೆ ಒಳ್ಳೆಯದಾದರೆ ನಾವು ನಿರ್ಧಾರ ತೆಗೆದುಕೊಳ್ಳುತ್ತೇವೆ. ಅದರ ನಂತರವೂ ಬೇರೆ ರಾಜ್ಯಗಳಿಗಿಂತಲೂ ನಮಲ್ಲಿ ಹಾಲಿನ ಮಾರಾಟ ದರ ಕಡಿಮೆ ಇರಲಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆ ಸೇರಿದಂತೆ ಯಾವುದೇ ಹೆಚ್ಚಳ ಮಾಡಿದರೂ ಅದನ್ನು ದೇಶ ಸೇವೆಗೆ ಎಂಬಂತೆ ಬಿಂಬಿಸಲಾಗುತ್ತದೆ. ಆದರೆ ರಾಜ್ಯ ಸರ್ಕಾರ ದರ ಪರಿಷ್ಕರಣೆ ಮಾಡಿದರೆ ವಿರೋಧಗಳು ವ್ಯಕ್ತವಾಗುತ್ತಿವೆ ಎಂದರು. ಉರ್ದು ಹಬ್ಬ ಆಚರಣೆಗೆ ಸಚಿವ ಯು.ಟಿ.ಖಾದರ್ ನೀಡಿರುವ ಪ್ರಸ್ತಾವನೆಯ ಬಗ್ಗೆ ತಮಗೆ ಮಾಹಿತಿ ಇಲ್ಲ. ಆದರೆ ದೇಶೀಯವಾಗಿ ಬಳಕೆಯಲ್ಲಿರುವ ತೆಲುಗು, ತಮಿಳು, ಉರ್ದು, ಒಡಿಯಾ ಸೇರಿದಂತೆ ಯಾವುದೇ ಭಾಷಾ ವಿಚಾರವನ್ನು ಸಂಭ್ರಮಿಸುವುದರಲ್ಲಿ ತಪ್ಪಿಲ್ಲ. ಆಂಧ್ರಪ್ರದೇಶದಲ್ಲಿ ಉರ್ದು ಎರಡನೇ ಅಧಿಕೃತ ಭಾಷೆಯಾಗಿದೆ.

ಅಲ್ಲಿ ಬಿಜೆಪಿ ಮೈತ್ರಿ ಕೂಟವೇ ಅಧಿಕಾರದಲ್ಲಿಲ್ಲವೇ? ಎಂದು ಪ್ರಶ್ನಿಸಿದರು. ಇಂತಹ ವಿಚಾರಗಳ ಬದಲಾಗಿ ನಿರುದ್ಯೋಗ, ಬೆಲೆ ಏರಿಕೆ, ತಲಾ ಆದ-ಾಯ, ವಿದೇಶಾಂಗ ನೀತಿ, ಆಹಾರ ಮತ್ತು ತೈಲಗಳ ಕೊರತೆಯಂತಹ ಜನರ ವಿಚಾರಗಳ ಬಗ್ಗೆ ಬಿಜೆಪಿಯವರು ಚರ್ಚೆ ಮಾಡಲಿ ಎಂದು ಸಲಹೆ ನೀಡಿದರು. ಗುತ್ತಿಗೆದಾರರು ಪದೇ ಪದೇ ಬಾಕಿ ಬಿಲ್‌ಗಳ ಬಗ್ಗೆ ಹೇಳಿಕೆ ನೀಡುವುದು ಸರಿಯಲ್ಲ.

ಮಹಿಳೆಯರ ಆರೋಗ್ಯ ಹಾಗೂ ಸುರಕ್ಷತೆಯ ದೃಷ್ಟಿಯಿಂದ ಗರ್ಭಪಾತವು ವೈದ್ಯರ ನಿಗಾವಣೆಯಲ್ಲಿ ಇರಲಿ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ಅನಪೇಕ್ಷಿತ ಗರ್ಭಧಾರಣೆಯ ಸಂದರ್ಭದಲ್ಲಿ ಮಹಿಳೆಯರಿಗೆ ಕಾನೂನುಬದ್ಧ, ಸುರಕ್ಷಿತ ಹಾಗೂ ಗುಣಮಟ್ಟದ ಗರ್ಭಪಾತ ಸೇವೆಗಳು ದೊರೆಯುವುದು ಅತ್ಯಂತ ಅವಶ್ಯಕವಾಗಿದ್ದು, ಆರೋಗ್ಯ ದೃಷ್ಟಿಯಿಂದ ತಜ್ಞವೈದ್ಯರ ನೇತೃತ್ವದಲ್ಲಿ ಗರ್ಭಪಾತದ ಸೇವೆ ಒದಗಿಸುವುದು ಅಗತ್ಯವಾಗಿದೆ ಎಂದು ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಪುಂಡಲಿಕ ಗಂಜಿ ತಿಳಿಸಿದರು.

ಸುರಕ್ಷಿತ ಗರ್ಭಪಾತ ದಿನದ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕುಟುಂಬ ಕಲ್ಯಾಣ ಕಾರ್ಯಕ್ರಮ ವಿಭಾಗ ಹಾಗೂ ಪ್ರಾಥಮಿಕ ಅರೋಗ್ಯ ಕೇಂದ್ರ ಚಂದ್ರಬಂಡ ಅಡಿ ಕಟ್‌ಲೆಟ್‌ಕೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ ಗರ್ಭಧಾರಣೆಯ ಆರಂಭಿಕ ಹಂತದಲ್ಲಿ ವೈದ್ಯಕೀಯ ಮೇಲ್ವಿಚಾರಣೆಯಲ್ಲಿ



ಮಾತ್ರೆಗಳ ಮೂಲಕ ಗರ್ಭಪಾತ ಮಾಡುವುದು ಸುರಕ್ಷಿತವಾಗಿದ್ದು, ಮೂರು ತಿಂಗಳೊಳಗಿನ ಸೇವೆಗಳು ಸುಲಭವಾಗಿ ದೊರೆಯುವಂತಿರಬೇಕು ಎಂದು ತಿಳಿಸಿದರು. ಭಾರತದಲ್ಲಿ 1971ರ ವೈದ್ಯಕೀಯ ಗರ್ಭಪಾತ ಕಾಯ್ದೆಗೆ 2021ರಲ್ಲಿ ತಿದ್ದುಪಡಿ ತರಲಾಗಿದ್ದು 20 ವಾರಗಳವರೆಗೆ ಒಬ್ಬ ನೋಂದಾಯಿತ ವೈದ್ಯರ ಶಿಫಾರಸ್ಸು ಹಾಗೂ 20 ರಿಂದ 24 ವಾರಗಳವರೆಗೆ ವಿಶೇಷ ಸಂದರ್ಭಗಳಲ್ಲಿ ಇಬ್ಬರು ವೈದ್ಯರ ಅನುಮತಿಯೊಂದಿಗೆ ಗರ್ಭಪಾತ ಮಾಡಿಸಿಕೊಳ್ಳಲು ಅವಕಾಶವಿದೆ. ಎಂದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಮಾತನಾಡಿ, ಗರ್ಭಪಾತ ಪಡೆಯುವ ಮಹಿಳೆಯ ವೈಯಕ್ತಿಕ ವಿವರ ಹಾಗೂ ಗುರುತನ್ನು ಸೌಂಪೂರ್ಣವಾಗಿ ಗೌಪ್ಯವಾಗಿಡಲಾಗುವುದು.

ತಜ್ಞರ ಶಿಫಾರಸ್ಸು,ನಿಗಾವಣೆ ಇಲ್ಲದೆ ಗರ್ಭಪಾತ ಅಪಾಯಕಾರಿ ಸುರಕ್ಷಿತ ಗರ್ಭಪಾತವು ತಾಯಿಯ ಅರೋಗ್ಯದ ದೃಷ್ಟಿಯಿಂದ ಅತ್ಯಂತ ಮಹತ್ವವಾಗಿದ್ದು, ಗರ್ಭಾವಸ್ಥೆಯ ಅವಧಿಯನ್ನು ಆಧರಿಸಿ ವೈದ್ಯಕೀಯ ಗರ್ಭಪಾತ (ಮಾತ್ರೆಗಳ ಮೂಲಕ) ಅಥವಾ ಶಸ್ತ್ರಚಿಕಿತ್ಸಾ ಗರ್ಭಪಾತ ವಿಧಾನಗಳನ್ನು ವೈದ್ಯರು ನಿರ್ಧರಿಸುತ್ತಾರೆ. ಯಾವುದೇ ಕಾರಣಕ್ಕೂ ವೈದ್ಯರ ಚೀಟಿ ಇಲ್ಲದೆ ಸ್ವಂತ ನಿರ್ಧಾರದಿಂದ ಮಾತ್ರೆಗಳನ್ನು ಸೇವಿಸಬಾರದು. ಅಲ್ಲದೆ ಗರ್ಭಪಾತದ ನಂತರ ಸೋಂಕು ತಡೆಗಟ್ಟಲು ಅಗತ್ಯ ವಿಶ್ರಾಂತಿ, ವೈದ್ಯರು ಸೂಚಿಸಿದ ಮಾತ್ರೆಗಳ ಸೇವನೆ ಮತ್ತು ನೈರ್ಮಲ್ಯ ಕಾಪಾಡುವುದು ಮುಖ್ಯವಾಗಿದ್ದು, ಸರ್ಕಾರದಿಂದ ಅನುಮೋದಿತ ಆಸ್ಪತ್ರೆ ಅಥವಾ ಅರ್ಹ ಸ್ತ್ರೀರೋಗ ತಜ್ಞರ ಮಾರ್ಗದರ್ಶನದಲ್ಲೇ ಗರ್ಭಪಾತ ಮಾಡಿಸಿಕೊಳ್ಳಬೇಕು. ಅನಧಿಕೃತ ಕ್ಲಿನಿಕ್ ಅಥ-ವಾ ಮನೆಮದ್ದುಗಳಿಗೆ ಮೊರೆಹೋಗುವುದು ಜೀವಕ್ಕೆ ಅಪಾಯಕಾರಿ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ ಜಗತಾಪ, ಹಿರಿಯ ಆರೋಗ್ಯ ಸುರಕ್ಷಣಾಧಿಕಾರಿ ಯಶೋಧಾ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಧನಲಕ್ಷ್ಮೀ, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ತಾಯಂದಿರು, ಪಾಲಕರು ಭಾಗವಹಿಸಿದ್ದರು.

ಸಾಹಿತ್ಯ ಸಿಂಚನ

ರೆಕ್ಕೆ ಬಿಚ್ಚಿದ ಕನಸು

ಮನದಾಳದಲ್ಲಿ ಮೂಡಿದ ಕನಸು,
ಮೌನದೊಳಗೆ ಬೆಳೆದಿತು.
ಕತ್ತಲೆಯ ದಾರಿಯ ನಡುವೆಯೂ,
ಬೆಳಕಿನ ಹಾದಿ ಹುಡುಕಿತು.

ನಿನ್ನೆಗಿನ ನೋವು ಮರೆತು,
ಇಂದು ಹೊಸ ಹೆಜ್ಜೆ ಇಟ್ಟಿತು.
ಭರವಸೆಯ ಗಾಳಿಯ ಜೊತೆ,
ರೆಕ್ಕೆ ಬಿಚ್ಚಿ ಹಾರಿತು.

ಆಕಾಶದ ಅಂಚು ಮುಟ್ಟುವಂತೆ,
ಆಸೆಗಳು ರೆಕ್ಕೆ ಕಟ್ಟಿದವು.
ಸೋಲಿನ ನೆರಳು ಬಂದರೂ,
ಧೈರ್ಯದಿಂದ ಮುಂದೆ ಸಾಗಿದವು.

ಕನಸು ಕೇವಲ ಕನಸಾಗದೆ,
ಗುರಿಯ ರೂಪ ತಾಳಿತು.
ನಂಬಿಕೆಯ ಬಲದೊಂದಿಗೆ,
ಜೀವನಕ್ಕೆ ಅರ್ಥ ನೀಡಿತು.

ರೆಕ್ಕೆ ಬಿಚ್ಚಿದ ಆ ಕನಸು,
ನನ್ನೊಳಗೆ ಹೊಸ ಲೋಕ ಕಟ್ಟಿತು.
ಒಂದು ದಿನ ನನಸಾಗುವ ನಂಬಿಕೆಯಲ್ಲಿ,
ಪ್ರತಿದಿನವೂ ಮುಂದೆ ನಡೆಯಿತು.

ಹಿಂದೂ ಮುಖಂಡರಿಗೆ ಭದ್ರತೆ ಹೆಚ್ಚಿಸಲು ಆಗ್ರಹ

ನೈಜ್ಯ ದೆಸೆ ನ್ಯೂಸ್

ವಿಜಯಪುರ: ಕರ್ನಾಟಕದ ಚಿಕ್ಕಬಳ್ಳಾಪುರದಲ್ಲಿ ಬಂಧಿತರಾದ ಶಂಕಿತ ಉಗ್ರರ ವಿಚಾರಣೆ ವೇಳೆ ಹಿಂದೂ ಮುಖಂಡರಾದ ಬಸನಗೌಡ ಪಾಟೀಲ ಯತ್ನಾಳ, ಮಾಜಿ ಸಂಸದ ಪ್ರತಾಪ ಸಿಂಹ ಹಾಗೂ ಮಾಜಿ ಸಚಿವ ಸಿ.ಟಿ. ರವಿ ಅವರನ್ನು ಹತ್ಯೆ ಮಾಡುವ ಕುರಿತು ಹೇಳಿಕೆ ನೀಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ, ಈ ವಿಷಯವನ್ನು ಖಂಡಿಸಿ ಸಂಘಟನೆ ವತಿಯಿಂದ ಉಪಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಗೃಹ ಸಚಿವರು ಹಾಗೂ ಕರ್ನಾಟಕದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.



ಈ ಸಂದರ್ಭದಲ್ಲಿ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಕಿರಣ ಕಾಳೆ ಮಾತನಾಡಿ, ಹಿಂದೂ ಮುಖಂಡರ ಹತ್ಯೆಗೆ ಸಂಚು ರೂಪಿಸುವಂತಹ ಮನೋಭಾವ ಹೊಂದಿರುವವರನ್ನು ಪತ್ತೆಹಚ್ಚಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ವಹಿಸಬೇಕು ಎಂದು ಆಗ್ರಹಿಸಿದರು. ಸಂಘಟನೆಯ ಹಿರಿಯ ಮುಖಂಡ ವಿಕ್ರಮ ಗಾಯಕವಾಡ ಮಾತನಾಡಿ, ಹಿಂದೂ ಸಮಾಜದೊಳಗೆ ಪರಸ್ಪರ ಟೀಕೆ-ಟಿಪ್ಪಣಿಗಳನ್ನು ಮಾಡುತ್ತ ವಿಭಜನೆ ಉಂಟುಮಾಡುವ ಬದಲು, ರಾಷ್ಟ್ರವಿರೋಧಿ ಚಟುವಟಿಕೆಗಳ ವಿರುದ್ಧ ಒಗ್ಗಟ್ಟಿನಿಂದ ಹೋರಾಡಬೇಕು ಎಂದು ಹೇಳಿದರು. ಸಂಘಟನೆಯ ಜಿಲ್ಲಾ ಅಧ್ಯಕ್ಷ ಆನಂದ ಚೌಧರಿ ಮಾತನಾಡಿ, ಬಸನಗೌಡ ಪಾಟೀಲ ಯತ್ನಾಳ, ಪ್ರತಾಪ್ ಸಿಂಹ, ಸಿ.ಟಿ. ರವಿ ಹಾಗೂ ಪ್ರಮೋದ್ ಮುತಾಲಿಕ್ ಸೇ-ರಿದಂತೆ ಪ್ರಮುಖ ಹಿಂದೂ ಮುಖಂಡರಿಗೆ ಸರ್ಕಾರ ಹೆಚ್ಚಿನ ಭದ್ರತೆ ಒದಗಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಂಘಟನೆಯ ಮುಖಂಡರಾದ ಧನಂ-ಜಯ ನಿಮಗ್ರೇ, ಈರಣ್ಣ ವಾಡೆದ, ಗಣೇಶ ಗರುಡಕರ, ಶ್ರೀಶೈಲ ಶಿಂಧೆ, ಜ್ಞಾನೇಶ್ವರ ಶಿಂಧೆ, ಆಕಾಶ ಗೋತ್ರಾಳೆ, ರಾಹುಲ ಸೂರ್ಯವಂಶಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ವಿಶ್ವ ಹಿರಿಯ ನಾಗರಿಕ ದಿನಾಚರಣೆಯ ಅಂಗವಾಗಿ ಕಾರುಣ್ಯಾಶ್ರಮದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ನೈಜ್ಯ ದೆಸೆ ನ್ಯೂಸ್

ಸಿಂಧನೂರು – ಸಿಂಧನೂರು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ನಮ್ಮ ಕ್ಲಿನಿಕ್ ಸುಕಾಲಪೇಟೆ ಹಾಗೂ ಮಹೆಬೂಬ್ ಕಾಲೋನಿ ಇವರುಗಳ ಸಹಕಾರದೊಂದಿಗೆ " ವಿಶ್ವ ಹಿರಿಯ ನಾಗರಿಕರ ದಿನಾಚರಣೆ"ಯನ್ನು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ " ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಔಷಧಿಗಳ ವಿತರಣೆ" ಮಾಡುವ ಮೂಲಕ ಅರ್ಥಪೂರ್ಣವಾಗಿ ಹಿರಿಯರ ದಿನಾಚರಣೆಯನ್ನು ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮದ ಎಲ್ಲಾ ಹಿರಿಯ ನಾಗರಿಕ-ರಿಗೆ ಮತ್ತು ವಯಸ್ಕರ ಬುದ್ಧಿಮಾಂದ್ಯ-ರಿಗೆ ವೈದ್ಯರುಗಳು ಹಾಗೂ ಸಿಬ್ಬಂದಿಗಳು ತಪಾಸಣೆ ಮಾಡಿ ಔಷಧಿಗಳನ್ನು ವಿತರಿಸಿದರು. ನಂತರ ಆಶ್ರಮದ ಕಾರ್ಯ ಅಧ್ಯಕ್ಷರಾದ ಡಾ. ಚನ್ನಬಸವಸ್ವಾಮಿ ಹಿರೇಮಠ ಮಾತನಾಡಿ ನಮ್ಮ ಸಿಂಧನೂರಿನ ಕಾರುಣ್ಯ ಸಂಸ್ಥೆಯು



2023ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಹಿರಿಯ ನಾಗರಿಕ ಸೇವಾ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದಂತಹ ಏಕೈಕ ಸಂಸ್ಥೆ ಎನ್ನುವ ಮೂಲಕ ಕರ್ನಾಟಕ ಸರ್ಕಾರದ ಪ್ರಶಸ್ತಿಯನ್ನು ಪಡೆದು ಆ ಪ್ರಶಸ್ತಿಗೆ ಶೋಭೆ ತಂದಿದೆ. ಸಮಾಜದಲ್ಲಿರುವ ಹಿರಿಯ ನಾಗ-ರಿಕರ ಗೌರವ ಘನತೆಯನ್ನು ಕಾಪಾಡಬೇಕು ಎನ್ನುವ ಹಲವಾರು ಅಭಿಯಾನಗಳ ಮೂಲಕ ಅನೇಕ ಜಾಗೃತಿ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ. ಇಂದಿಗೆ ನಮ್ಮ ಸಂಸ್ಥೆಯು ಪ್ರಶಸ್ತಿ ಪಡೆದು ಮೂರು ವರ್ಷಗಳ ಈ ಶುಭ ಸಮಯದಲ್ಲಿ ತಾಲೂಕ ಆರೋಗ್ಯಾಧಿಕಾ-ರಿಗಳು ತಮ್ಮ ಇಲಾಖೆಯಿಂದ ನೀಡಿರುವ ಈ ಸೇವೆ ಶ್ಲಾಘನೀಯವಾಗಿದೆ. ಮತ್ತು ಇಂದಿನ ಈ ವಿಶೇಷ ದಿನದಂದು ನಮ್ಮ ಸಿಂಧನೂ-ರಿನ ಪ್ರತಿಯೊಬ್ಬ ಹಿರಿಯರುಗಳಿಗೆ ನಮ್ಮ ಕಾರುಣ್ಯ ಕುಟುಂಬದ ವತಿಯಿಂದ ಗೌರವದ ನಮನಗಳನ್ನು ಸಲ್ಲಿಸಿ ಮತ್ತು ಆಶ್ರಮಕ್ಕೆ ಸಹಾಯ ಸಹಕಾರ ಮಾಡುವಂತಹ ಎಲ್ಲಾ ದಾನಿಗಳಿಗೂ ಕೂಡ ಸಿಂಧನೂರಿನ ಈ ಕರುಣೆಯ ಕಾರುಣ್ಯ ಕುಟುಂಬದಿಂದ ಅಂತರಾಳದ ಅಭಿಮಾನದ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ.

ಮತ್ತು ಮಕ್ಕಳಾದವರು ಹೆತ್ತವರನ್ನು ನಮ್ಮಂತಹ ಕರ್ಮ ಭೂಮಿಗೆ ಯಾವತ್ತೂ ಕೂಡ ತಳ್ಳಬಾರದು. ಮತ್ತು ಸಮಾಜದಲ್ಲಿರುವ ಎಲ್ಲಾ ಹಿರಿಯರನ್ನು ಕೂಡ ತಂದೆ ತಾಯಿಗಳ ಸಮಾನರು ಎಂದುಕೊಂಡಾಗ ಮಾತ್ರ ತಮ್ಮೆಲ್ಲರ ಬದುಕು ಸಾರ್ಥಕತೆಯಾಗುತ್ತದೆ. ಎಂದು ಮಾತನಾಡಿ ಸಮಸ್ತ ನಾಡಿನ ಹಾಗೂ ರಾಷ್ಟ್ರದ ಜನತೆಗೆ ವಿಶ್ವಹಿರಿಯ ನಾಗರಿಕ ದಿನಾಚರಣೆಯ ಶುಭಾಶಯಗಳನ್ನು ಕೋರಿದರು. ಈ ಕಾರ್ಯಕ್ರಮದಲ್ಲಿ ಸುಕಾಲಪೇಟೆ ಹಾಗೂ ಮಹಿಬೂಬ್ ಕಾಲೋನಿಯ ನಮ್ಮ ಕ್ಲಿನಿಕ್ ನ ವೈದ್ಯಾಧಿಕಾರಿಗಳಾದ ಡಾ.ಮಣಿಶಂಕರ. ಡಾ. ಗುರುರಾಜ. ಹಾಗೂ ಸಿಬ್ಬಂದಿಗಳಾದ ಹೇಮಾ ಬಸವರಾಜ ಅಜೀಜ್. ಹಾಗೂ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ ಮತ್ತು ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ವಿದ್ಯಾಶ್ರೀ. ಮಹಾಂತೇಶ ದೋಟಿಹಾಳ. ಶರಣು ಸ್ವಾಮಿ.ಬಸವ ಸ್ವಾಮಿ. ಮತ್ತು ಆಶ್ರಯದಾತರುಗಳೆಲ್ಲ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಔಷಧಿಗಳನ್ನು ಸ್ವೀಕರಿಸಿದರು.

ಮಕ್ಕಳಲ್ಲಿ ಸಾಂಸ್ಕೃತಿಕ ಭಾವನೆ ಬೆಳೆಸಬೇಕು ಎಲ್.ಡಿ. ಜೋಶಿ

ನೈಜ್ಯ ದೆಸೆ ನ್ಯೂಸ್

ಕೊಪ್ಪಳ: ಶಾಲಾ ಶಿಕ್ಷಣವು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯನ್ನು ಗು-ರಿಯಾಗಿಸಿಕೊಂಡಿದ್ದು, ಜ್ಞಾನ, ಮೌಲ್ಯಗಳು, ಮನೋಭಾವ ಹಾಗೂ ಜೀವನ ಕೌಶಲ್ಯಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)ಯ ಪ್ರಭಾರಿ ಪ್ರಾಚಾರ್ಯ ಎಲ್.ಡಿ. ಜೋಶಿ ಹೇಳಿದರು.

ತಾಲೂಕಿನ ಮುನಿರಾಬಾದ್ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಗುರುವಾರ ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಯೋಜನೆಯಡಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಜನಪದ ನೃತ್ಯ ಹಾಗೂ ಪಾತ್ರಾಭಿನಯ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಭಾವನೆ ಹಾಗೂ ಸೃಜನಶೀಲತೆಯನ್ನು ಬೆಳೆಸುವಲ್ಲಿ ಇಂತಹ ಸಹಪಠ್ಯ ಚಟುವಟಿಕೆಗಳು ಮಹತ್ವದ ಪಾತ್ರ ವಹಿಸುತ್ತವೆ. ಶಿಕ್ಷಣದ ಜೊತೆಗೆ ನಮ್ಮ ನಾಡಿನ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಪರಿಚಯಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ನೋಡಲ್ ಅಧಿಕಾರಿ ವೆಂಕಟೇಶ್ ಗೌಡ್ರ ಮಾತನಾಡಿ, ಮಕ್ಕಳಿಗೆ ನಮ್ಮ ವೈವಿಧ್ಯಮಯ ಸಂಸ್ಕೃತಿ ಹಾಗೂ ಅಮೂಲ್ಯ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ಉದ್ದೇಶದಿಂದ ಈಗಾಗಲೇ ತಾಲೂಕು ಹಂತದಲ್ಲಿ ಸ್ಪರ್ಧೆಗಳನ್ನು ನಡೆಸಲಾಗಿದೆ. ತಾಲೂಕು ಹಂತದಲ್ಲಿ ವಿಜೇತರಾದ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದಲ್ಲಿ ಸ್ಪರ್ಧಿಸುತ್ತಿದ್ದು, ಇಲ್ಲಿಂದ ಆಯ್ಕೆಯಾಗುವ ತಂಡಗಳು ರಾಜ್ಯ ಮಟ್ಟದ



ಸ್ಪರ್ಧೆಯಲ್ಲಿ ಭಾಗವಹಿಸಲಿವೆ ಎಂದು ತಿಳಿಸಿದರು. ಸ್ಪರ್ಧೆಯಲ್ಲಿ ಜಿಲ್ಲೆಯ ನಾಲ್ಕು ತಾಲೂಕುಗಳಿಂದ ಒಟ್ಟು ಒಂಬತ್ತು ತಂಡಗಳು ಭಾಗವಹಿಸಿದ್ದವು.


ಹಿರಿಯ ಉಪನ್ಯಾಸಕರಾದ ಗುರುರಾಜ, ಸುರೇಂದ್ರಗೌಡ ಪಾಟೀಲ, ಬಸವರಾಜ ಮೇಟಿ ಹಾಗೂ ಜಿಲ್ಲಾ ಮಟ್ಟದ ನಿರ್ಣಾಯಕರಾಗಿ ಕಿಶನರಾವ್ ಕುಲಕರ್ಣಿ, ಗುರುರಾಜ ಎಲ್., ವಿಜಯಕುಮಾರ, ಡಾ. ಜೀವನಸಾಬ ಬಿನ್ನಾಳ, ಗವಿಸಿದ್ದಪ್ಪ ಮಟ್ಟಿ ಹಾಗೂ ಮಲ್ಲಿಕಾರ್ಜುನ ಗುಡಿ ಉಪಸ್ಥಿತರಿದ್ದರು. ಉಪನ್ಯಾಸಕ ಕೃಷ್ಣ ಕಿರಿಗಿ ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು.

ಜಾಲಹಳ್ಳಿ ಸಮೀಪದ ಸೋಮನಮರಡಿ ಸರ್ಕಾರಿ ಶಾಲೆಗೆ ಮೂಲಭೂತ ಸೌಕರ್ಯ ಒದಗಿಸಲು ರೈತ ಸಂಘ ಆಗ್ರಹ

ನೈಜ್ಯ ದೆಸೆ ನ್ಯೂಸ್

ಸೋಮನ ಮರಡಿ: ರಾಯಚೂರು ಜಿಲ್ಲೆ ಅರಕೇರಾ ತಾಲೂಕಿನ ಸೋಮನಮರಡಿ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ (ರಿ) ಸೋಮನಮರಡಿ ಗ್ರಾಮ ಘಟಕದ ವತಿಯಿಂದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಶಾಲೆಯಲ್ಲಿ 407ಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಆರ್‌ಒ (RO) ಪ್ಲಾಂಟ್ ಅಳವಡಿಸಬೇಕು



ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಇದಲ್ಲದೆ, ಶಾಲಾ ಆವರಣದ ಗೋಡೆ ಕುಸಿದು ಬಿದ್ದಿದ್ದು, ಶೌಚಾಲಯಗಳು ದುರಸ್ತಿ ಅಗತ್ಯವಿದೆ. ಶಾಲಾ ಆವರಣದಲ್ಲಿ ಹೈಮಾಸ್ಟ್ ಲೈಟ್ ಅಳವಡಿಸಬೇಕು. ಶಾಲೆಯ ಮುಖ್ಯದ್ವಾರದ ಮುಂಭಾಗದ ಕಾಂಪೌಂಡ್ ಜಾಗದ ಸುರಕ್ಷತೆಗಾಗಿ ತಂತಿ ಬೇಲಿಯನ್ನು ಇನ್ನೂ ಮೂರು ಅಡಿ ಎತ್ತರಿಸಬೇಕು ಎಂದು ಆಗ್ರಹಿಸಲಾಗಿದೆ.

ವಿದ್ಯಾರ್ಥಿಗಳ ಸುರಕ್ಷತೆ ಹಾಗೂ ಶೈಕ್ಷಣಿಕ ವಾತಾವರಣದ ದೃಷ್ಟಿಯಿಂದ ಶಾಲೆಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕೂಡಲೇ ಕಲ್ಪಿಸುವುದು ಗ್ರಾಮ ಪಂಚಾಯಿತಿಯ ಜವಾಬ್ದಾರಿಯಾಗಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ರೈತ ಸಂಘದ ಮುಖಂಡರು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಗ್ರಾಮ ಘಟಕದ ಅಧ್ಯಕ್ಷ ಶಿವಣ್ಣ ಲಿಂಗದಳ್ಳಿ, ತಾಲೂಕು ಉಪಾಧ್ಯಕ್ಷ ಹುಸೇನ್ ಭಾಷಾ, ಮುಖಂಡರಾದ ಶಾಂತಮೂರ್ತಿ ಸ್ವಾಮಿ, ತಿಮ್ಮಯ್ಯ ವಕ್ರಾಣಿ, ಹನುಮಯ್ಯ ಯಲಗಟ್ಟಿ, ರಮೇಶ್ ಹಾಲುಬಾವಿ, ಮೌನೇಶ್ ಯಾದವ್, ಹನುಮಯ್ಯ ಹೊಸೂರು, ಪ್ರಾಂತ ರೈತ ಸಂಘದ ಮುಖಂಡರಾದ ವಿಶ್ವನಾಥ ಅಂಗಡಿ, ಬಾಲಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿಭಾಗಮಟ್ಟದ ಕ್ರೀಡಾಕೂಟದಲ್ಲಿ ಸಿರವಾರದ ಬಾಲಕಿಯರ ಸಾಧನೆ: ರಾಜ್ಯಮಟ್ಟಕ್ಕೆ ಆಯ್ಕೆ

ನೈಜ್ಯ ದೆಸೆ ನ್ಯೂಸ್

ಸಿರವಾರ: ಕಲಬುರಗಿಯಲ್ಲಿ ನಡೆದ ವಿಭಾಗಮಟ್ಟದ ಕ್ರೀಡಾಕೂಟದಲ್ಲಿ ಸಿರವಾರ ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿಯರು ವಿವಿಧ ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಕ್ರೀಡಾಕೂಟದ 4100 ಮೀಟರ್ ರಿಲೇ ಓಟದ ಸ್ಪರ್ಧೆಯಲ್ಲಿ ಕಾವೇರಿ, ಅಪ್ಸಾನ, ಮಹಿಮುದ್ ಹಾಗೂ ಭಾಗ್ಯಶ್ರೀ ಅವರ ತಂಡ ಪ್ರಥಮ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದೆ. ತ್ರಿವಿಧ ಜಿಗಿತ ಸ್ಪರ್ಧೆಯಲ್ಲಿ



ಶಾಲೆಯ ವಿದ್ಯಾರ್ಥಿನಿ ಲಲಿತಾ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಅದೇ ರೀತಿ, 100 ಮೀಟರ್ ಓಟದ ಸ್ಪರ್ಧೆಯಲ್ಲಿ ಅಪ್ಸಾನ ತೃತೀಯ ಸ್ಥಾನ ಪಡೆದು ಶಾಲೆಯ ಗೌರವವನ್ನು ಹೆಚ್ಚಿಸಿದ್ದಾರೆ.

ವಿದ್ಯಾರ್ಥಿನಿಯರು ತಮ್ಮ ಪರಿಶ್ರಮ, ನಿರಂತರ ಅಭ್ಯಾಸ ಹಾಗೂ ಕ್ರೀಡಾಸಕ್ತಿಯಿಂದ ವಿಭಾಗಮಟ್ಟದ ಸ್ಪರ್ಧೆಯಲ್ಲಿ ಸಾಧನೆ ಮಾಡಿರುವುದು ಶಾಲೆಯ ಶಿಕ್ಷಕರು, ಪೋಷಕರು ಹಾಗೂ ಪಟ್ಟಣದ ಜನರಲ್ಲಿ ಸಂತಸ ಮೂಡಿಸಿದೆ. ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಯ ವಿದ್ಯಾರ್ಥಿನಿಯರು ಕ್ರೀಡಾ ಕ್ಷೇತ್ರದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿರುವುದು ಇತರ ವಿದ್ಯಾರ್ಥಿಗಳಿಗೂ ಪ್ರೇರಣೆಯಾಗಿದೆ.

ವಿದ್ಯಾರ್ಥಿನಿಯರ ಸಾಧನೆಗೆ ಶಾಲೆಯ ಪ್ರಾಚಾರ್ಯ ದೇವಣ್ಣ ನಾಯ್ಕ್, ದೈಹಿಕ ಶಿಕ್ಷಣ ಶಿಕ್ಷಕ ಮಹಿಬೂಬ ಪಾಷ, ಶಾಲೆಯ ಶಿಕ್ಷಕ ವೃಂದ, ಪೋಷಕರು ಹಾಗೂ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಂಸಿ) ಸದಸ್ಯರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ರಾಜ್ಯಮಟ್ಟದ ಕ್ರೀಡಾಕೂಟದಲ್ಲಿಯೂ ವಿದ್ಯಾರ್ಥಿನಿಯರು ಇದೇ ಉತ್ಸಾಹ ಮತ್ತು ಆತ್ಮವಿಶ್ವಾಸದಿಂದ ಸ್ಪರ್ಧಿಸಿ ಉತ್ತಮ ಫಲಿತಾಂಶ ಗಳಿಸಲಿ ಎಂದು ಶಾಲೆಯ ಆಡಳಿತ ಮಂಡಳಿ ಹಾಗೂ ಶಿಕ್ಷಕರು ಶುಭ ಹಾರೈಸಿದ್ದಾರೆ.

ಗೃಹ ಜ್ಯೋತಿ ಫಲಾನುಭವಿಗಳ ಪರಿಶೀಲನೆ: 15 ದಿನ ಹೆಚ್ಚುವರಿ ಕಾಲಾವಕಾಶಕ್ಕೆ ಬೆಸ್ಕಾಂ ಮನವಿ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರದ ಪ್ರಮುಖ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಪರಿಶೀಲನಾ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದ್ದು, ಇನ್ನೂ ಪರಿಶೀಲನೆಗೆ ಒಳಪಡದ ಗ್ರಾಹಕರಿಗೆ 15 ದಿನಗಳ ಹೆಚ್ಚುವರಿ ಕಾಲಾವಕಾಶ ನೀಡುವಂತೆ ಬೆಸ್ಕಾಂ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ.

ಅರ್ಹ ಕುಟುಂಬಗಳಿಗೆ ತಿಂಗಳಿಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ ಗೃಹ ಜ್ಯೋತಿ ಯೋಜನೆಯ ದುರುಪಯೋಗ ತಡೆಯುವ ಉದ್ದೇಶದಿಂದ ರಾಜ್ಯ ಸರ್ಕಾರ ಫಲಾನುಭವಿಗಳ ಮನೆ-ಮನೆ ಪರಿಶೀಲನೆ ಆರಂಭಿಸಿತ್ತು. ಆರಂಭದಲ್ಲಿ ಒಂದು ತಿಂಗಳ ಕಾಲಾವಕಾಶ ನೀಡಲಾಗಿದ್ದು, ಬಳಿಕ ಸೆಪ್ಟೆಂಬರ್‌ವರೆಗೆ ವಿಸ್ತರಿಸಲಾಗಿತ್ತು.



ಬೆಸ್ಕಾಂ ವ್ಯಾಪ್ತಿಯಲ್ಲಿ ಒಟ್ಟು 95.8 ಲಕ್ಷ ಗೃಹಬಳಕೆ ವಿದ್ಯುತ್ ಗ್ರಾಹಕರಿದ್ದು, ಅವರಲ್ಲಿ 68.9 ಲಕ್ಷ ಮಂದಿ ಗೃಹ ಜ್ಯೋತಿ ಯೋಜನೆಗೆ ನೋಂದಾಯಿಸಿಕೊಂಡಿದ್ದಾರೆ. ಈ ಪೈಕಿ ಶೇ.98ರಿಂದ 99ರಷ್ಟು ಫಲಾನುಭವಿಗಳ ಪರಿಶೀಲನೆ ಪೂರ್ಣಗೊಂಡಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಪರಿಶೀಲನಾ ಪ್ರಕ್ರಿಯೆಯಲ್ಲಿ ಸುಮಾರು 5.5 ಲಕ್ಷ ಗ್ರಾಹಕರು ವೈಯಕ್ತಿಕ ವಿವರಗಳನ್ನು ನೀಡಲು ನಿರಾಕರಿಸಿರುವುದು ಹಾಗೂ ಸುಮಾರು 18 ಲಕ್ಷ ಮನೆಗಳು ಬೀಗ ಹಾಕಿರುವುದು, ಖಾಲಿ ಇರುವುದು ಅಥವಾ ನಿವಾಸಿಗಳನ್ನು ಸಂಪರ್ಕಿಸಲು ಸಾಧ್ಯವಾಗದಿರುವುದು ಕಂಡುಬಂದಿದೆ. ಹೀಗಾಗಿ ಈ ಫಲಾನುಭವಿಗಳ ಅರ್ಹತೆಯನ್ನು ಇನ್ನೂ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿಲ್ಲ.

ಈ ಹಿನ್ನೆಲೆಯಲ್ಲಿ ಅಂತಹ ಗ್ರಾಹಕ-ರಿಗೆ ಕೊನೆಯದಾಗಿ 15 ದಿನಗಳ ಕಾಲಾವಕಾಶ ನೀಡುವಂತೆ ಬೆಸ್ಕಾಂ ಸರ್ಕಾರದ ಅನುಮತಿ ಕೋ-ರಿದೆ. ಸರ್ಕಾರ ಅನುಮತಿ ನೀಡಿದರೆ, ಸಂಬಂಧಿಸಿದ ಗ್ರಾಹಕರು ಮನೆ-ಮನೆ ಪರಿಶೀಲನೆಗಾಗಿ ಕಾಯುವ ಬದಲು ತಮ್ಮ ಸಮೀಪದ ಬೆಸ್ಕಾಂ ವಿಭಾಗ ಕಚೇ-ರಿಗೆ ತೆರಳಿ ಅಗತ್ಯ ವೈಯಕ್ತಿಕ ವಿವರಗಳು ಹಾಗೂ ಅರ್ಹತೆಯ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ.

ನಿಗದಿತ ಅವಧಿಯೊಳಗೆ ಅರ್ಹತೆಯನ್ನು ದೃಢಪಡಿಸದ ಗ್ರಾಹಕರನ್ನು ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಪಟ್ಟಿಯಿಂದ ತೆಗೆದುಹಾಕುವ ಸಾಧ್ಯತೆ ಇದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ. ಈ ಮೂಲಕ ಉಚಿತ ವಿದ್ಯುತ್ ಯೋಜನೆಯ ಪ್ರಯೋಜನ ಅರ್ಹ ಕುಟುಂಬಗಳಿಗೆ ಮಾತ್ರ ತಲುಪುವಂತೆ ಮಾಡುವ ಪ್ರಯತ್ನವನ್ನು ಸರ್ಕಾರ ಮುಂದುವರಿಸಿದೆ. ಹಿನ್ನೆಲೆ: ಅನರ್ಹ ಫಲಾನುಭವಿಗಳನ್ನು ಪಟ್ಟಿಯಿಂದ ಕೈಬಿಡಲು ರಾಜ್ಯ ಸರ್ಕಾರ ಕೈಗೊಂಡಿದ್ದ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಪರಿಶೀಲನಾ ಪ್ರಕ್ರಿಯೆಯ ಗಡುವು ಈಗಾಗಲೇ ಮುಕ್ತಾಯಗೊಂಡಿದೆ. ಬೆಸ್ಕಾಂ ಸಾಧನೆ: ಬೆಂಗಳೂರು ಸೇರಿದಂತೆ ಬೆಸ್ಕಾಂ ವ್ಯಾಪ್ತಿಯಲ್ಲಿ ನೋಂದಾಯಿಸಿಕೊಂಡಿದ್ದ ಒಟ್ಟು 68.9 ಲಕ್ಷ ಗ್ರಾಹಕರ ಪೈಕಿ ಶೇ.98ರಿಂದ 99ರಷ್ಟು ಮಂದಿಯ ಪರಿಶೀಲನೆ ಯಶಸ್ವಿಯಾಗಿ ಪೂರ್ಣಗೊಂಡಿದೆ.

ನೇಮಕಾತಿ ಪ್ರಕಟಣೆ

HLL Lifecare ನೇಮಕಾತಿ 2026 ವಿವಿಧ ಖಿಖಿ ಟ್ರೈನೀ ಮತ್ತು SSLC ಟ್ರೈನೀ ಹುದ್ದೆಗಳಿಗೆ ನೇರ ಸಂದರ್ಶನ (Walk-in Interview) ಅಕ್ಟೋಬರ್ 1, 2026

HLL Lifecare ನೇಮಕಾತಿ 2026: ವಿವಿಧ ITI ಟ್ರೈನೀ ಮತ್ತು SSLC ಟ್ರೈನೀ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಊಐಐ ಖಿಜಿಜಿ–ಛಿಚಿಡಿಜ ಐಟುಣಜಜ ತನ್ನ ಅಧಿಕೃತ ಅಕ್ಟೋಬರ್ 2026ರ ಅಧಿಸೂಚನೆಯ ಮೂಲಕ ಖಿಖಿ ಟ್ರೈನೀ ಮತ್ತು ಖಖಐಅ ಟ್ರೈನೀ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಳಗಾವಿಯಲ್ಲಿ (ಕರ್ನಾಟಕ ಸರ್ಕಾರ) ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05–ಅಕ್ಟೋಬರ್–2026 ರಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಅಧಿಕೃತ ವೆಬ್‌ಸೈಟ್: lifecarehll.com

"ಅಂತರರಾಷ್ಟ್ರೀಯ ವೃದ್ಧಪ್ಯಾ ದಿನಾಚರಣೆ"

❑ ನೈಜ್ಯ ದೇಸಿ ನ್ಯೂಸ್

ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕ ಆರೋಗ್ಯ ಅಧಿಕಾ–ರಿಗಳ ಕಾರ್ಯಾಲಯ ಸಿಂಧನೂರ್ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಗಾಂಧಿನಗರ ಇವರ ಸಂಯಕ್ತಾಶ್ರಯದಲ್ಲಿ ವಿರೂಪಾಪುರ್ ಗ್ರಾಮದಲ್ಲಿ ಒರವಲಯ ಸಾರ್ವತ್ರಿಕಾ ಮಕ್ಕಳ ಲಸಿಕಾ ಸತ್ರದಲ್ಲಿ ಗ್ರಾಮ ನೈರ್ಮಲ್ಯಸಮಿತಿ ಸಭೆಯಲ್ಲಿ ಹಿರಿಯ ನಾಗರಿಕರನ್ನು ಉದ್ದೇಶಿಸಿ ಶ್ರೀಮತಿ ಗೀತಾ ಹಿರೇಮಠ್ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣ ಅಧಿಕಾರಿಗಳು ತಾಲೂಕು ಆರೋಗ್ಯ ಅಧಿಕಾ–ರಿಗಳ ಕಾರ್ಯಲಯ ಸಿಂಧನೂರು ಇವರು ಮಾತನಾಡಿ ಪ್ರತಿ ವರ್ಷ ಅಕ್ಟೋಬರ್ 1 ರಂದು ಪ್ರಪಂಚದಾದ್ಯಂತ ಅಂತರರಾಷ್ಟ್ರೀಯ ವೃದ್ಧರ ದಿನಾಚರಣೆ ಅಥವಾ ವಿಶ್ವ ಹಿರಿಯ ನಾಗ–ರಿಕರ ದಿನಾಚರಣೆಯನ್ನು (International Day of Older Persons) ಆಚರಿಸಲಾಗುತ್ತದೆ.

ಸಮಾಜ ಮತ್ತು ಕುಟುಂಬಕ್ಕೆ ಹಿರಿಯರು ನೀಡಿದ ಅನನ್ಯ ಕೊಡುಗೆಗಳನ್ನು ಸ್ಮರಿಸಲು ಹಾಗೂ ವೃದ್ಧಾಪ್ಯದಲ್ಲಿ ಅವರು ಎದುರಿಸುವ ಆರೋಗ್ಯ ಮತ್ತು ಸಾಮಾಜಿ–ಕ ಸವಾಲುಗಳ ಕುರಿತು ಜಾಗೃತಿ ಮೂಡಿಸಲು ಈ ದಿನವನ್ನು ಮೀಸಲಿಡಲಾಗಿದೆ.

14 ಡಿಸೆಂಬರ್ 1990 ರಂದು



ಯುನೈಟೆಡ್ ನೇಷನ್ಸ್ (ಗಂ) ಸಾಮಾನ್ಯ ಸಭೆಯು ಪ್ರತಿವರ್ಷ ಅಕ್ಟೋಬರ್ 1 ರಂದು ಅಂತರರಾಷ್ಟ್ರೀಯ ಹಿರಿಯರ ದಿನವನ್ನಾಗಿ ಆಚರಿಸಲು ನಿರ್ಣಯಿಸಿತು.

ಮೊದಲ ಬಾರಿಗೆ ಅಕ್ಟೋಬರ್ 1, 1991 ರಂದು ಮೊದಲ ಬಾರಿಗೆ ಈ ದಿನವನ್ನು ವಿಶ್ವದಾದ್ಯಂತ ಆಚರಿಸಲಾಯಿತು.

ದಿನಾಚರಣೆಯ ಮುಖ್ಯ ಉದ್ದೇಶಗಳು ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದ ಹಿರಿಯರನ್ನು ಗೌರವಿಸುವುದು ಮತ್ತು ವೃದ್ಧಾಪ್ಯದಲ್ಲಿ ಅವರಿಗೆ ಪ್ರೀತಿ, ಭದ್ರತೆ ಒದಗಿಸುವುದು. ವೃದ್ಧಾಪ್ಯದಲ್ಲಿ ಕಾಣಿಸಿಕೊಳ್ಳುವ ಮಾನಸಿಕ ಹಾಗೂ ದೈಹಿಕ ಆರೋಗ್ಯ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆ ಮತ್ತು ಕಾಳಜಿ ಸಿಗುವಂತೆ ಮಾಡುವುದು. ಹಿರಿಯ ನಾಗರಿಕ–ರಿಗೆ ಉಚಿತ ತಪಾಸಣೆ ಪ್ರತ್ಯೇಕ ಕೌಂಟರ್ ಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಮಾಡಲಾಗಿದೆ ರಿಂದ ಆರೋಗ್ಯದ ಸೇವೆ ಪಡೆಯಲು ಅನುಕೂಲವಾಗುವಂತೆ ನೋಡಿಕೊಳ್ಳಲು

ಹಿರಿಯರನ್ನು ಮನೆಯಿಂದ ಹೊರಹಾಕುವುದು, ವೃದ್ಧಾಶ್ರಮಗಳಿಗೆ ತಳ್ಳುವುದು ಅಥವಾ ಅವರ ಮೇಲಾಗುವ ದೌರ್ಜನ್ಯಗಳ ವಿರುದ್ಧ ಜಾಗೃತಿ ಮೂಡಿಸುವುದು ಅಗತ್ಯವಾಗಿದ 'ಹಿರಿಯ ನಾಗರಿಕರಿಗೆ ಸಿಗಬೇಕಾದ ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರಿಕರಿಗೆ ಆಸರೆಯಾಗಲು ಪ್ರತಿ ತಿಂಗಳು ವಿಶ್ರಾಂತಿ ವೇತನ (Pension), ಉಚಿತ ಆರೋಗ್ಯ ಸೇವೆ ಹಾಗೂ ಮೂಲಭೂತ ಹಕ್ಕುಗಳನ್ನು ಖಚಿತಪಡಿಸುವುದು.

2026ರ ಧ್ಯೇಯವಾಕ್ಯ (Theme) ಪ್ರತಿ ವರ್ಷ ವಿಶ್ವಸಂಸ್ಥೆಯು ಈ ದಿನಕ್ಕಾಗಿ ನಿರ್ದಿಷ್ಟ ಥೀಮ್ ಅನ್ನು ನಿಗದಿಪಡಿಸುತ್ತದೆ. 2026ರ ಘೋಷಣೆ "The Age of Longevity: Rethinking Systems for Longer Lives" "ಗೌರವದಿಂದ ವೃದ್ಯಾಪ್ಯವನ್ನು ಕಳಿಯೋಣ ವೃದ್ಧರಿಗೆ ಆರೈಕೆ ಮತ್ತು ಬೆಂಬಲ ವ್ಯವಸ್ಥೆಯನ್ನು ಬಲಪಡಿಸುವುದು " ನಮ್ಮ ಕರ್ತವ್ಯ ಮನೆಯಲ್ಲಿರುವ ಹಿರಿಯರೊಂದಿಗೆ ಪ್ರತಿದಿನ ಒಂದಿಷ್ಟು ಸಮಯ ಕಳೆಯುವುದು.

ಅವರ ಅನುಭವ ಮತ್ತು ಮಾರ್ಗದರ್ಶನಕ್ಕೆ ಸೂಕ್ತ ಮನ್ನಣೆ ನೀಡುವುದು ಅವರ ಆರೋಗ್ಯ ಪರಿಶೀಲನೆ ಹಾಗೂ ಅಗತ್ಯಗಳನ್ನು ಪೂರೈಸುವುದು. ಹಿರಿಯರು ನಮ್ಮ ಕುಟುಂಬ ಮತ್ತು ಸಮಾಜದ ಆಧಾರಸ್ತಂಭಗಳು.

ಅವರನ್ನು ಗೌರವದಿಂದ ಕಂಡು, ಅವರ ಇಳಿವಯಸ್ಸನ್ನು ನೆಮ್ಮದಿಯನ್ನಾಗಿಸುವುದು ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ. ಸದರಿ ಸಭೆಯಲ್ಲಿ ಇಸ್ಮಾಯಿಲ್ ಬಿ ಕಊಅಔ, ಭೀಮಮ್ಮ ಆಶಾ ಕಾರ್ಯಕರ್ತೆ, ಅರುಣಾ, ಕ್ರೀಷ್ಣಮ್ಮ ಅಂಗನವಾಡಿ ಕಾರ್ಯಕರ್ತೆಯರು, ಸರೋಜಮ್ಮ ಅಂಗನವಾಡಿ ಸಾಯಕಿ, ಹಾಗೂ ಗರ್ಭಿಣಿ ತಾಯಂದಿರು ಹಿರಿಯನಾಗರಿಕರು ಉಪಸ್ಥಿತರಿದ್ದರು.

ಮಹಾಲಿಂಗಪುರದ ಮೌಲಾನಾ ಆಜಾದ್ ಇಂಗ್ಲಿಷ್ ಮಿಡಿಯಮ್ ಶಾಲೆಗೆ ಪ್ರಭಾರ ಮುಖ್ಯೋಪಾಧ್ಯಾಯರಾಗಿ ಅಧಿಕಾರ ಸ್ವೀಕಾರ

❑ ನೈಜ್ಯ ದೇಸಿ ನ್ಯೂಸ್

ಮಹಾಲಿಂಗಪುರ: ಕರ್ನಾಟಕದ ಮೌಲಾನಾ ಆಜಾದ್ ಇಂಗ್ಲಿಷ್ ಮಿಡಿಯಮ್ ಶಾಲೆಯಲ್ಲಿ ಮಹಾಲಿಂಗಪುರದ ಪ್ರಭಾರ ಮುಖ್ಯೋಪಾಧ್ಯಾಯರಾಗಿ ಸಿದ್ದಯ್ಯ ಮಠಪತಿ ಅವರು ಅಧಿಕಾರ ವಹಿಸಿಕೊಂಡರು.



ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು, ನೂತನ ಪ್ರಭಾರ ಮುಖ್ಯೋಪಾಧ್ಯಾಯ–ರಿಗೆ ಶುಭಾಶಯಗಳನ್ನು ಕೋರಿದರು. ಶಾಲೆಯ ಶೈಕ್ಷಣಿಕ ಚಟುವಟಿಕೆಗಳು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎಲ್ಲರ ಸಹಕಾರದೊಂದಿಗೆ ಕರ್ತವ್ಯ ನಿರ್ವಹಿಸುವುದಾಗಿ ಸಿದ್ದಯ್ಯ ಮಠಪತಿ ತಿಳಿಸಿದರು. ಅಧಿಕಾರ ಸ್ವೀಕಾರದ ಸಂದರ್ಭದಲ್ಲಿ ಸಹಕರಿಸಿದ ಎಲ್ಲ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಸಿದ್ದಯ್ಯ ಮಠಪತಿ ಅವರು ಕೃತಜ್ಞತೆ ಸಲ್ಲಿಸಿದರು.

ಸೇತುವೆ ಕಾಮಗಾರಿ ವಿಳಂಬಕ್ಕೆ ಶಾಸಕ ಹಂಪಯ್ಯ ನಾಯಕ ಅಸಮಾಧಾನ

60 ಲಕ್ಷ ವೆಚ್ಚದ ಕಾಮಗಾರಿ ತ್ವರಿತ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ

❑ ನೈಜ್ಯ ದೇಸಿ ನ್ಯೂಸ್

ಸಿರವಾರ: ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ. ಹಂಪಯ್ಯ ನಾಯಕ ಅವರು ಸಿರವಾರ ತಾಲೂಕಿನ ಬಲ್ಲಟಗಿ ಗ್ರಾಮದಿಂದ ಎನ್. ಹೊಸೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ?60 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಸೇತುವೆ ಕಾಮಗಾ–ರಿಯನ್ನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸೇತುವೆ ಕಾಮಗಾರಿ ನಿರೀಕ್ಷಿತ ವೇಗದಲ್ಲಿ ನಡೆಯದಿರುವುದನ್ನು ಗಮನಿಸಿದ ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು. ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕೈಗೆತ್ತಿಕೊಂಡಿರುವ ಕಾಮಗಾ–ರಿಯನ್ನು ಅನಗತ್ಯವಾಗಿ ವಿಳಂಬ ಮಾಡದೆ ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಸಾರ್ವಜನಿಕರ ಸಂಚಾರಕ್ಕೆ ಶೀಘ್ರ ಅನುಕೂಲ ಕಲ್ಪಿಸಲು ಸೂಚನೆ ಸೇತುವೆ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ಸ್ಥಳೀಯ ಗ್ರಾಮಸ್ಥರು ಹಾಗೂ ವಾಹನ ಸವಾರರಿಗೆ ಎದುರಾಗಬಹುದಾದ ಸಮಸ್ಯೆಗಳನ್ನು ಪರಿಗಣಿಸಿದ ಶಾಸಕರು, ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ಮನ್ಸೂದ್ ಅಲಿ ಅವ–ರಿಗೆ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡು, ಗುಣಮಟ್ಟವನ್ನು ಕಾಪಾಡಿಕೊಂಡು ಶೀಘ್ರ ಪೂರ್ಣಗೊಳಿಸಬೇಕು. ಸಾರ್ವಜನಿಕರು ಯಾವುದೇ ತೊಂದರೆಯಿಲ್ಲದೆ ಸಂಚರಿಸಲು ಅನುಕೂಲವಾಗುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬಲ್ಲಟಗಿ ಮತ್ತು ಎನ್. ಹೊಸೂರು ಗ್ರಾಮಗಳ ಸಂಪರ್ಕಕ್ಕೆ ಸೇತುವೆ ಪ್ರಮುಖವಾಗಿದ್ದು, ರೈತರು, ಗ್ರಾಮಸ್ಥರು ಹಾಗೂ ವಾಹನ ಸವಾರರ ದೈನಂದಿನ ಸಂಚಾರಕ್ಕೆ ಇದು ಸಹಕಾರಿಯಾಗಲಿದೆ.



ಸೇತುವೆ ಕಾಮಗಾರಿ ಪೂರ್ಣಗೊಂಡರೆ ಈ ಭಾಗದ ಜನರ ಸಂಚಾರದ ಸಮಸ್ಯೆಗಳಿಗೆ ಪರಿಹಾರ ದೊರೆಯಲಿದೆ ಎಂಬ ನಿರೀಕ್ಷೆಯಿದೆ. ಶಾಸಕರು ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿರುವುದರಿಂದ ಕಾಮಗಾರಿಗೆ ವೇಗ ದೊರೆಯಲಿದೆ ಎಂಬ ಆಶಯವನ್ನು ಸ್ಥಳೀಯರು ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ರವಿ ಭಾಸ್ಕರ್, ವಕೀಲ ರಂಗಾರೆಡ್ಡಿ, ಬೀರಪ್ಪ ಬಲ್ಲಟಗಿ, ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ಮನ್ಸೂದ್ ಅಲಿ, ಗ್ರಾಮದ ರೈತ ಮುಖಂಡರು ಹಾಗೂ ಇತರರು ಉಪಸ್ಥಿತರಿದ್ದರು.

ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಮತ್ತೆ ಹಣ, ಮೊಬೈಲ್, ಸಿಮ್ ಪತ್ತೆ

❑ ನೈಜ್ಯ ದೇಸಿ ನ್ಯೂಸ್

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಮತ್ತೆ ಹಣ, ಮೊಬೈಲ್, ಸಿಮ್‌ಕಾರ್ಡ್‌ಗಳು ಪತ್ತೆಯಾಗಿವೆ.ಈ ಬಗ್ಗೆ ಜೈಲು ಅಧಿಕಾರಿ ಕೊಟ್ರೇಶ್ ಅವರು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಜೈಲಿನೊಳಗೆ ನಿಷೇಧಿತ ವಸ್ತುಗಳ ಬಳಕೆ ಆರೋಪದ ಹಿನ್ನಲೆಯಲ್ಲಿ ನಿನ್ನೆ ಕೊಟ್ರೇಶ್ ಅವರು ಕಾರಾಗೃಹದ ಬ್ಯಾರಕ್‌ಗಳನ್ನು ಪರಿಶೀಲನೆ ನಡೆಸಿದಾಗ ಸಿ



ಬ್ಯಾರಕ್‌ನಲ್ಲಿ ಒಂದು ಮೊಬೈಲ್, ಮೂರು ಸಿಮ್‌ಕಾರ್ಡ್‌ಗಳು ಪತ್ತೆಯಾಗಿವೆ.

ಮೊನ್ನೆ ಅಡಿಗೆ ಮನೆ ಸಮೀಪವಿರುವ ಶೌಚಾಲಯವೊಂದರ ಬಳಿ 8,400 ರೂ. ಹಣ ಪತ್ತೆಯಾಗಿದೆ.ಈ ಹಿನ್ನಲೆಯಲ್ಲಿ ಕೊಟ್ರೇಶ್ ಅವರು ನೀಡಿದ ದೂರಿನನ್ವಯ ಎರಡು ಎಫ್‌ಐಆರ್‌ಗಳು ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.ಎಷ್ಟೇ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತಂದರೂ ಪರಪ್ಪನ ಅಗ್ರಹಾರ ಜೈಲಿನಲ್ಲಿ ಅಕ್ರಮಗಳಿಗೆ ಬ್ರೇಕ್ ಹಾಕುವುದು ಸವಾಲಾಗಿದೆ. ಕಾರಾಗೃಹದೊಳಗೆ ನಿಷೇಧಿತ ವಸ್ತುಗಳು ಹೇಗೆ ಒಳಗೆ ಹೋದವು ಎಂಬುವುದು ಪೊಲೀಸರಿಗೆ ಪತ್ತೆಹಚ್ಚುವುದು ಕಷ್ಟಸಾಧ್ಯವಾಗಿದೆ.ಈ ಹಿಂದೆಯೂ ಕಾರಾಗೃಹದ ಮೇಲೆ ಅಧಿಕಾರಿಗಳು ದಾಳಿ ಮಾಡಿದ ಸಂದರ್ಭದಲ್ಲಿ ಮೂರು ಪ್ರಕರಣಗಳಲ್ಲಿ ಆರು ಮೊಬೈಲ್‌ಗಳು ಸಿಕ್ಕಿದ್ದವು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಜೈಲು ಸಿಬ್ಬಂದಿ ಸೇ–ರಿದಂತೆ ಒಂಬತ್ತು ಮಂದಿಯನ್ನು ಬಂಧಿಸಿದ್ದರು.ಇದೀಗ ಮತ್ತೆ ಜೈಲಿನೊಳಗೆ ಹಣ, ಮೊಬೈಲ್, ಸಿಮ್‌ಕಾರ್ಡ್‌ಗಳು ಪತ್ತೆಯಾಗಿರುವುದು ಕಾರಾಗೃಹ ಸಿಬ್ಬಂದಿಗಳ ಕಾರ್ಯವೈಖರಿಯನ್ನು ಪ್ರಶ್ನಿಸುವಂತಾಗಿದೆ.

ಬಿಜೆಪಿ ಮಸ್ಕಿ ಮಂಡಲದ ಯುವ ಮೋರ್ಚಾ ಉಪಾಧ್ಯಕ್ಷನಾಗಿ ಬಸವರಾಜ ವಿರುಪಾಪುರ ಆಯ್ಕೆ

❑ ನೈಜ್ಯ ದೇಸಿ ನ್ಯೂಸ್

ಸಿಂಧನೂರು: ಸಿಂಧನೂರು ತಾಲೂಕಿನ ವಿರುಪಾಪುರ ಗ್ರಾಮದ ಯುವಕ ಬಸವರಾಜ ವಿರುಪಾಪುರ ಅವರನ್ನು ಮಸ್ಕಿ ವಿಧಾನಸಭೆ ಕ್ಷೇತ್ರದ ಮಸ್ಕಿ ಮಂಡಲದ ಯುವ ಮೋರ್ಚಾ ಉಪಾಧ್ಯಕ್ಷರನ್ನಾಗಿ ಭಾರತೀಯ ಜನತಾ ಪಾರ್ಟಿಯ ಮಸ್ಕಿ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾದ ಚನ್ನಬಸವ ದೇಸಾಯಿ ತುರ್ವಿಹಾಳ ಆಯ್ಕೆ ಮಾಡಿ ಆದೇಶ ಮಾಡಿದ್ದಾರೆ.

ಈ ಜವಾಬ್ದಾರಿಯುತ ಹೊಣೆಗಾ–ರಿಕೆಯನ್ನು ಅತ್ಯಂತ ಪ್ರಾಮಾಣಿಕತೆಯಿಂದ, ಶ್ರದ್ಧೆಯಿಂದ ಕ್ಷೇತ್ರದ ಎಲ್ಲರನ್ನೂ ಒಗ್ಗೂಡಿಸಿ, ಅವರಲ್ಲಿ ನಾನು ಕೂಡ ಒಬ್ಬನಾಗಿ ಬಿಜೆಪಿ ಪಕ್ಷಕ್ಕಾಗಿ ಕಾರ್ಯ ನಿರ್ವಹಿಸುತ್ತಾ ಪಕ್ಷದ



ಏಳಿಗೆಗಾಗಿ ಬಲವರ್ಧನೆಯ ಸಂಘಟನೆಗಾಗಿ ಶ್ರಮಿಸಿ ಕೆಳಮಟ್ಟ ದಿಂದ ಬಿಜೆಪಿ ಪಕ್ಷವನ್ನು ಸದೃಢಗೊಳಿಸಿ ಮುಂಬರುವ ಎಲ್ಲಾ ರೀತಿಯ ಸವಾಲುಗಳನ್ನು ಎದುರಿಸಲು ಶಕ್ತಿ ತುಂಬುತ್ತಾ, ಪಕ್ಷದ ವರ್ಚಸ್ಸನ್ನು ಹೆಚ್ಚಿಸುವಲ್ಲಿ ಸತತ ಪರಿಶ್ರಮದಿಂದ ಶ್ರದ್ಧೆ, ಭಕ್ತಿ, ಪ್ರಾಮಾಣಿಕತೆಯಿಂದ ಶ್ರಮಿಸಲು ಭಾರತೀಯ ಜನತಾ ಪಕ್ಷ ಆಶಿಸುತ್ತದೆ ಎಂದು ಯುವ ಮೋರ್ಚಾ ಅಧ್ಯಕ್ಷರಾದ ಚನ್ನಬಸವ ದೇಸಾಯಿ ತಿಳಿಸಿದ್ದಾರೆ.

ಮುಂಬರುವ 2028ರ ವಿಧಾನಸಭಾ ಚುನಾವಣೆಯ ವೇಳೆಗೆ ನನ್ನ ಕ್ಷೇತ್ರದಲ್ಲಿ ಬಿಜೆಪಿ ಪಕ್ಷವನ್ನು ಸಂಘಟಿಸಿ ಯುವಕರಲ್ಲಿ ಜಾಗೃತಿ ಮೂಡಿಸುವ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ, ನನ್ನ ಮೇಲೆ ವಿಶ್ವಾಸವಿಟ್ಟು ಮಸ್ಕಿ ಮಂಡಲದ ಯುವ ಮೋರ್ಚಾದ ಉಪಾಧ್ಯಕ್ಷ ಸ್ಥಾನ ನೀಡಿದ್ದಾರೆ, ಅವರ ವಿಶ್ವಾಸಕ್ಕೆ ಚ್ಯುತಿ ಬರದಹಾಗೆ ಕೆಲಸ ನಿರ್ವಹಿಸುತ್ತೇನೆ, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಅವರನ್ನು

ಕಾಂಗ್ರೆಸ್‌ನ ಭ್ರಷ್ಟ ಆಡಳಿತವನ್ನು ಜನರಿಗೆ ಮನವರಿಕೆ ಮಾಡಿಕೊಡುತ್ತೇನೆ, ಗ್ಯಾರಂಟಿ ಯೋಜನೆ ಹೇಳಿ ರಾಜ್ಯದಲ್ಲಿ ಅಭಿವೃದ್ಧಿಯನ್ನು ಮರೆತು ಕುಳಿತಿದೆ.

ಮತ್ತೊಮ್ಮೆ ಮಸ್ಕಿ ಕ್ಷೇತ್ರದ ಶಾಸಕರನ್ನಾಗಿ ಮಾಡುವ ದೃಷ್ಟಿಯಿಂದ ಪಕ್ಷಕ್ಕಾಗಿ ಹಗಲಿರುಳು ದುಡಿಯುತ್ತೇನೆ, ನನ್ನನ್ನು ಮಸ್ಕಿ ಮಂಡಲದ ಯುವ ಮೋರ್ಚಾ ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡಿದ ಪ್ರತಾಪಗೌಡ ಪಾಟೀಲ್ ಅವ–ರಿಗೂ, ಅಧ್ಯಕ್ಷ ಚನ್ನಬಸವ ದೇಸಾಯಿ ತುರ್ವಿಹಾಳ ಹಾಗೂ ಮಂಡಲದ ಅಧ್ಯಕ್ಷ ಶರಣಬಸವ ಸೊಪ್ಪಿನಮಠ ಅವರಿಗೂ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸುತ್ತೇನೆ. ಬಸವರಾಜ ವಿರುಪಾಪುರ.)

ಸಂಚಾರ ನಿಯಮ ಉಲ್ಲಂಘಿಸಿ ದಂಡ ಪಾವತಿಸದ ವಾಹನಗಳ ಮಾರಾಟಕ್ಕೆ ಸುಪ್ರೀಂ ನಿರ್ಬಂಧ

❑ ನೈಜ್ಯ ದೇಸಿ ನ್ಯೂಸ್

ನವದೆಹಲಿ: ಸಂಚಾರ ನಿಯಮಗಳನ್ನು ಉಲ್ಲಂಘಿಸಿ ದಂಡ ಪಾವತಿಸದೆ ತಪ್ಪಿಸಿಕೊಳ್ಳುವ ವಾಹನ ಸವಾರರು ಹಾಗೂ ಮಾಲೀಕರಿಗೆ ಸುಪ್ರೀಂಕೋರ್ಟ್ ಭಾರೀ ಆಘಾತ ನೀಡಿದೆ.ಇ–ಚಲನ್ ದಂಡ ಬಾಕಿ ಇರುವ ವಾಹನಗಳ ಆರ್‌ಸಿ (ನೋಂದಣಿ ಪ್ರಮಾಣಪತ್ರ) ನವೀಕರಣ, ಮಾಲೀಕತ್ವ ವರ್ಗಾವಣೆ, ಚಾಲನಾ ಪರವಾನಗಿ (ಡಿಎಲ್) ನವೀಕರಣ ಹಾಗೂ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ನೀಡುವುದನ್ನು ತಕ್ಷಣದಿಂದಲೇ ಸ್ಥಗಿತಗೊಳಿಸುವಂತೆ ದೇಶದ ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಇಂದು ನಿರ್ದೇಶನ ನೀಡಲಾಗಿದೆ.

ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಹಾಗೂ ಕೆ.ವಿ. ವಿಶ್ವನಾಥ–'ನ್ ಅವರನ್ನೊಳಗೊಂಡ ಪೀಠವು, ದಂಡ ವಸೂಲಿ ಮಾಡಲು ಸಾಧ್ಯವಾಗದಿದ್ದ ಮೇಲೆ ಲಕ್ಷಾಂತರ ಇ–ಚಲನ್‌ಗಳನ್ನು ನೀಡುವುದರಲ್ಲಿ ಅರ್ಥ–'ವಿಲ್ಲ, ಎಂದು ಖಡಾಖಂಡಿತವಾಗಿ ಹೇಳಿದೆ. ಬಾಕಿ ಇರುವ ಇ–ಚಲನ್ ಹೊಂದಿರುವ ವಾಹನಗಳನ್ನು ತಕ್ಷಣವೇ ಪರಿವಾಹನ್ ಪೋರ್ಟಲ್‌ನಲ್ಲಿ ಕಪ್ಪು ಪಟ್ಟಿಗೆ ಸೇರಿಸಬೇಕು. ಇದರಿಂದ ವಾಹನಗಳ ಮಾರಾಟ ಅಥವಾ ವರ್ಗಾವಣೆ ಸಂಪೂರ್ಣ ಬಂದ್ ಆಗಲಿದೆ.



ದಂಡ ಪಾವತಿಯಾಗುವವರೆಗೆ ಯಾವುದೇ ತಪಾಸಣಾ ಕೇಂದ್ರಗಳು ವಾಹನಗಳಿಗೆ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ನೀಡಬಾರದು. ಆರ್‌ಸಿ, ಫಿಟ್ನೆಸ್ ಸರ್ಟಿಫಿಕೇಟ್, ವಿಳಾಸ ಬದಲಾವಣೆ ಮತ್ತು ನಕಲಿ ಆರ್‌ಸಿ ವಿನಂತಿಗಳನ್ನು ಅಧಿಕಾ–ರಿಗಳು ನಿರಾಕರಿಸಬೇಕು.ಪದೇ ಪದೇ ನಿಯಮ ಉಲ್ಲಂಘಿಸುವ ಚಾಲಕರ ಡಿಎಲ್ ನವೀಕರಣ ತಡೆಯುವುದರ ಜೊತೆಗೆ, ಚಾಲ್ತಿಯಲ್ಲಿರುವ ಪರವಾನಗಿಯನ್ನೇ ಅಮಾನತುಗೊಳಿಸಲು ಕ್ರಮಕೈಗೊಳ್ಳಬೇಕು. (ವರ್ಷದಲ್ಲಿ 5ಕ್ಕೂ ಹೆಚ್ಚು ಉಲ್ಲಂಘನೆ ಎಸಗಿದರೆ ಅದನ್ನು ಸಾರ್ವಜನಿಕರಿಗೆ ಅಪಾಯಕಾರಿ ಕೃತ್ಯ ಎಂದು ಪರಿಗಣಿಸಲಾಗುತ್ತದೆ). ಕೇವಲ ಚಲನ್ ನೀಡುವುದಷ್ಟೇ ಅಲ್ಲದೆ, ರಸ್ತೆಗಳಲ್ಲಿ ಕಡ್ಡಾಯ ತಪಾಸಣೆ ನಡೆಸಿ, ಬಾಕಿ ದಂಡ ಕಟ್ಟದ ವಾಹನಗಳನ್ನು ಜಪ್ತಿ ಮಾಡಲು ಆದೇಶಿಸಲಾಗಿದೆ.

ಇಡೀ ದೇಶದಲ್ಲಿ ನೀಡಲಾದ ಇ–ಚಲನ್‌ಗಳಲ್ಲಿ ಸುಮಾರು 49,194.05 ಕೋಟಿ ರೂ. ದಂಡ ಮೊತ್ತ ಬಾಕಿ ಉಳಿದಿದ್ದು, ಅದರಲ್ಲಿ ಕೇವಲ 26,175.05 ಕೋಟಿ ಮಾತ್ರ ವಸೂಲಿಯಾಗಿದೆ ಎಂದು ನ್ಯಾಯಾಲಯಕ್ಕೆ ತಿಳಿಸಲಾಯಿತು. ಈ ಹಿನ್ನೆಲೆಯಲ್ಲಿ ಬರಿ ಕಾಗದದ ಮೇಲಿನ ಕಾನೂನು ಬಿಟ್ಟು ನೆಲಮಟ್ಟದಲ್ಲಿ ಕಟ್ಟುನಿಟ್ಟಿನ ಕ್ರಮ ಜರುಗಿಸುವಂತೆ ನ್ಯಾಯಾಲಯ ಆದೇಶಿಸಿದೆ. ಇ–ಚಲನ್ ವ್ಯವಸ್ಥೆಯ ಉದ್ದೇಶ ಕೇವಲ ಡಿಜಿಟಲ್ ದಂಡ ರಚಿಸುವುದಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ವಾಹನಗಳ ಯಾದೃಚ್ಛಿಕ ತಪಾಸಣೆ ನಡೆಸಬೇಕು. ಬಾಕಿ ಇ–ಚಲನ್ ಹೊಂದಿರುವ ವಾಹನ ಪತ್ತೆಯಾದರೆ, ಕಾನೂನಿನ ಪ್ರಕಾರ ವಾಹನವನ್ನು ವಶಕ್ಕೆ ಪಡೆಯುವಂತಹ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆಯನ್ನೂ ನ್ಯಾಯಾಲಯ ಉಲ್ಲೇಖಿಸಿದೆ. ಇದಲ್ಲದೆ, ಸರಕು ವಾಹನಗಳ ಓವರ್‌ಲೋಡಿಂಗ್ ತಡೆಯಲು ತೂಕ–ಇನ್–ಚಲನೆ ವ್ಯವಸ್ಥೆ ಹಾಗೂ ಪಾದಚಾರಿಗಳ ಸುರಕ್ಷತಾ ನೀತಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆ ನಡೆಸುತ್ತಿವೆ.

ಮೋಟಾರು ವಾಹನ ಕಾಯ್ದೆಯ ಸೆಕ್ಷನ್ 1360 ಮತ್ತು ಕೇಂದ್ರ ಮೋಟಾರು ವಾಹನ ನಿಯಮಗಳ ನಿಯಮ 1670 ಅಡಿಯಲ್ಲಿ ವೇಗದ ಕ್ಯಾಮೆರಾಗಳು, ಸಿಸಿಟಿವಿ ಕ್ಯಾಮೆರಾಗಳು, ಸ್ಪೀಡ್ ಗನ್‌ಗಳು ಸೇ–ರಿದಂತೆ ತಂತ್ರಜ್ಞಾನ ಆಧಾರಿತ ಜಾರಿ ವ್ಯವಸ್ಥೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಂತೆ ನ್ಯಾಯಾಲಯ ಈಗಾಗಲೇ ಒತ್ತಾಯಿಸಿದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ರೂಪಿಸಿರುವ ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅನುಷ್ಠಾನಗೊಳಿಸಬೇಕು.

ಜಾರಿ ಸಾಧನಗಳ ಖರೀದಿ, ನಿಯೋಜನೆ ಮತ್ತು ಮಾಪನಾಂಕ ನಿರ್ಣಯ ಸೇರಿದಂತೆ ಇ–ಜಾರಿ ವ್ಯವಸ್ಥೆಯ ಅನುಷ್ಠಾನವನ್ನು ರಾಷ್ಟ್ರೀಯ ರಸ್ತೆ ಸುರಕ್ಷತಾ ಮಂಡಳಿ ಮೇಲ್ವಿಚಾರಣೆ ಮಾಡುವಂತೆ ಸೂಚಿಸಲಾಗಿದೆ. ರಸ್ತೆ ಸುರಕ್ಷತೆ ವಿಚಾರದಲ್ಲಿ ಓವರ್‌ಲೋಡ್ ಸಾರಿಗೆ ವಾಹನಗಳ ವಿರುದ್ಧವೂ ನ್ಯಾಯಾಲಯ ಗಮನ ಹರಿಸಿದೆ.

ಹೆಚ್ಚುವರಿ ಸರಕು ಇಳಿಸುವವರೆಗೆ ಅಂತಹ ವಾಹನಗಳು ತಪಾಸಣಾ ಸ್ಥಳವನ್ನು ದಾಟಿ ಮುಂದೆ ಸಾಗದಂತೆ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಗಿದೆ. ಓವರ್‌ಲೋಡ್‌ನಿಂದ ಬ್ರೇಕಿಂಗ್ ದೂರ ಹೆಚ್ಚಾಗುವುದು, ಬ್ರೇಕ್ ವೈಫಲ್ಯ, ಟೈರ್ ಸ್ಫೋಟ, ವಾಹನ ಪಲ್ಟಿಯಾಗುವ ಅಪಾಯ ಮತ್ತು ಸ್ಟೀರಿಂಗ್ ನಿಯಂತ್ರಣ ಕಡಿಮೆಯಾಗುವಂತಹ ಅಪಾಯಗಳಿರುವುದರಿಂದ ತೂಕ–ಅಳತೆ ವ್ಯವಸ್ಥೆಗಳನ್ನು ಎಲೆಕ್ಟ್ರಾನಿಕ್ ಜಾರಿ ಮತ್ತು ಟೋಲ್ ವ್ಯವಸ್ಥೆಗಳೊಂದಿಗೆ ಸಂಯೋಜಿಸುವ ಕುರಿತು ನ್ಯಾಯಾಲಯದ ಮುಂದೆ ಪ್ರಸ್ತಾಪಿಸಲಾಗಿದೆ.

ವಚನ ದರ್ಶನ

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು ಸಸಿಯೊಳಗಣ ರಸದ ರುಚಿಯಂತಿದ್ದಿತ್ತು, ನೆನೆಯೊಳಗಣ ಪರಿಮಳದಂತಿದ್ದಿತ್ತು,ಕೂಡಲ ಸಂಗಮದೇವಾ, ಕನ್ನೆಯ ಸ್ನೇಹದಂತಿದ್ದಿತ್ತು

ನೀವು ಕೇಳುತ್ತಿರುವುದು ಶಿವಶರಣ ವಿಶ್ವಗುರು ಶ್ರೀ ಬಸವಣ್ಣನವರ ಪ್ರಸಿದ್ಧ ವಚನಗಳಲ್ಲೊಂದಾದ ಉದಕದೊಳಗೆ ಬಚ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು. ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ಭಗವಂತನ ಕೂಡಲಸಂಗಮದೇವನ ಅಸ್ತಿತ್ವ ಮತ್ತು ಆತನ ಸಾಕ್ಷಾತ್ಕಾರದ ಅನುಭೂತಿಯನ್ನು ಅದ್ಭುತವಾದ ಉಪಮೆಗಳ ಮೂಲಕ ವಿವರಿಸಿದ್ದಾರೆ.

ಉದಕದೊಳಗೆ ಬಚ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು: ನೀರಿನ ಆಳದಲ್ಲಿ ಅಡಗಿರುವ ಬಡಬಾಗ್ನಿಯಂತೆ (ಜ್ವಾಲೆ) ದೇವರ ಶಕ್ತಿ ಜಗತ್ತಿನ ಕಣಕಣದಲ್ಲೂ ಗುಪ್ತವಾಗಿ ಅಡಗಿದೆ. ನೀರು ಮತ್ತು ಬೆಂಕಿ ಪರಸ್ಪರ ವಿರುದ್ಧವಾಗಿದ್ದರೂ ನೀರೊಳಗೆ ಉಷ್ಣತೆ ಇರುವಂತೆ, ಪ್ರಕೃತಿಯಲ್ಲಿ ಭಗವಂತನು ಅದೃಶ್ಯನಾಗಿ ನೆಲೆಸಿದ್ದಾನೆ.

ಸಸಿಯೊಳಗಣ ರಸದ ರುಚಿಯಂತಿದ್ದಿತ್ತು
ಚಿಕ್ಕದಾದ ಸಸ್ಯ ಅಥವಾ ಗಿಡದೊಳಗೆ ಇರುವ ರಸದ ರುಚಿಂ-ಋನ್ನು ಮೇಲ್ನೋಟಕ್ಕೆ ನೋಡಿ ತಿಳಿಯಲು ಸಾಧ್ಯವಿಲ್ಲ, ಅದನ್ನು ಅನುಭವಿಸಿಯೇ ತಿಳಿಯಬೇಕು. ಹಾಗೆಯೇ ದೇವರನ್ನು ಕಣ್ಣಿಗೆ ಕಾಣದಿದ್ದರೂ ಅನುಭವದಿಂದ ಅರಿಯಬಹುದು.

ನೆನೆಯೊಳಗಣ ಮೊಗ್ಗಿನೊಳಗಣ ಪರಿಮಳದಂತಿದ್ದಿತ್ತು ಹೂವಾಗುವ ಮುನ್ನ ಮೊಗ್ಗಿನೊಳಗೆ ಸುಗಂಧವು ಹೇಗೆ ಅಡಗಿರುತ್ತದೆಯೋ, ಹಾಗೆ ಭಗವಂತನ ಅಸ್ತಿತ್ವವು ಜಗತ್ತಿನಲ್ಲಿ ಅವಿಭಾಜ್ಯವಾಗಿದೆ. ಹೂವು ಅರಳಿದಾಗ ಪರಿಮಳ ಹರಡುವಂತೆ, ಭಕ್ತಿ ಪಕ್ವವಾದಾಗ ದೇವರು ಪ್ರಕಟನಾಗುತ್ತಾನೆ. ಕನ್ಯೆಯೊಳಗಣ ಒಲವಿನಂತಿದ್ದಿತ್ತು
ಒಬ್ಬ ಹೆಣ್ಣುಮಗಳ ಮನಸ್ಸಿನಲ್ಲಿರುವ ಪ್ರೀತಿ ಅಥವಾ ಒಲವು ಕಣ್ಣಿಗೆ ಕಾಣಿಸುವುದಿಲ್ಲ, ಆದರೆ ಅವಳು ಪ್ರೀತಿಸಿದಾಗ ಮಾತ್ರ ಅದು ವ್ಯಕ್ತವಾಗುತ್ತದೆ. ಅದೇ ರೀತಿ ಭಕ್ತನಲ್ಲಿ ನಿಜವಾದ ಭಕ್ತಿ ಮೂಡಿದಾಗ ಕೂಡಲಸಂಗಮದೇವನ ಸಾನ್ನಿಧ್ಯದ ಅರಿವಾಗುತ್ತದೆ.

ದೇವರು ಎಲ್ಲೋ ದೂರದಲ್ಲಿಲ್ಲ, ಅವನು ನಮ್ಮೊಳಗೇ, ಈ ಸೃಷ್ಟಿಯ ಪ್ರತಿ ಜೀವಿಯಲ್ಲೂ ಅತ್ಯಂತ ಸೂಕ್ಷ್ಮವಾಗಿ, ಅದೃಶ್ಯವಾಗಿ ಹಾಸುಹೊಕ್ಕಾಗಿದ್ದಾನೆ ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ತಿಳಿಸಿಕೊಟ್ಟಿದ್ದಾರೆ.ಬಸವಾದಿ ಶರಣರ ವಚನಗಳು ಮನುಕುಲದ ದಾ-ರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

ನಕಲಿ ದಾಖಲೆ ಸೃಷ್ಟಿಸಿ ಬೆಂಗಳೂರಿನ ಸುತ್ತಮುತ್ತ ಸರ್ಕಾರಿ ಭೂಮಿ ಕಬಳಿಕೆ

❑ ನ್ಯೈಜ್ಯ ದೆಸೆ ನ್ಯೂಸ್



ಬೆಂಗಳೂರು: ನಗರದ ಸುತ್ತಮುತ್ತ ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಿ ಭೂಮಿ ಕಬಳಿಸುವವರಿಗೆ ರಾಜ್ಯ ಸರ್ಕಾರ ಬೆಂಬಲವಾಗಿ ನಿಂತಿದೆ ಎಂದು ಮಾಗಡಿ ಮಾಜಿ ಶಾಸಕ ಎ.ಮಂಜುನಾಥ್ ಗಂಭೀರ ಆರೋಪ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಆರೋಪಕ್ಕೆ ಸಂಬಂಧಿಸಿದ ಕೆಲವು ದಾಖಲೆ ಪತ್ರಗಳನ್ನು ಪ್ರದರ್ಶಿಸಿದ ಅವರು, ಸರ್ಕಾರಿ ಭೂಮಿ ನಕಲಿ ದಾಖಲೆ ಮೂಲಕ ಕಬಳಿಸುವ ಬಗ್ಗೆ ಹಿಂದಿನ ಮುಖ್ಯಮಂತ್ರಿ, ಈಗಿನ ಮುಖ್ಯಮಂತ್ರಿ, ಕಂದಾಯ ಸಚಿವರು, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಕೊಡಿಗೇಹಳ್ಳಿ ಗ್ರಾಮದ 14 ಎಕರೆ ಭೂಮಿಯನ್ನು ಚಂದ್ರನ್, ಪ್ರಸಾದ್, ದಿವ್ಯ, ದೇವರಾಜ್ ಎಂಬುವವರ ಹೆಸರಿನಲ್ಲಿ ಸರ್ಕಾರಿ ಜಮೀನನ್ನು ಕಬಳಿಸಲಾಗಿದೆ. ಚಂದ್ರನ್ ಎಂಬುವವರು 1957 ರಲ್ಲಿ ಜನಿಸಿರುವುದು ಅವರ ಆಧಾರ್ ದಾಖಲೆಯಲ್ಲಿದೆ. ಆದರೆ ಅವರಿಗೆ 1954 ರಲ್ಲೇ ಸರ್ಕಾರಿ ಭೂಮಿ ಮಂಜೂರಾಗಿರುವ ದಾಖಲೆಯಿದೆ.

ಅಂದರೆ ಹುಟ್ಟುವ ಮುನ್ನವೇ ಜಮೀನು ಮಂಜೂರಾಗಿರುವ ದಾಖಲೆಯಿದೆ. ಸುಮಾರು 500 ರಿಂದ 600 ಕೋಟಿ ರೂ. ಬೆಲೆ ಬಾಳುವ ಜಮೀನನ್ನು ಕಬಳಿಸಲಾಗಿದೆ ಎಂದು ಆರೋಪಿಸಿದರು. ಬೆಂಗಳೂರು ಸುತ್ತಮುತ್ತ ಈ ರೀತಿ ನಡೆಯುತ್ತಿರುವ ಹಗಲು ದರೋಡೆಗೆ ಕಡಿವಾಣ ಹಾಕಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲು ಸಾಧ್ಯವಾಗುತ್ತದೆಯೇ? ಎಂದು ಸರ್ಕಾರವನ್ನು ಪ್ರಶ್ನಿಸಿದರು. ತಾವರೆಕೆರೆ ಬಳಿಯ ಕುರುಬರಹಳ್ಳಿ ಗ್ರಾಮದಲ್ಲಿ 26 ಎಕರೆ ಜಮೀನನ್ನು ನಕಲಿ ದಾಖಲೆ ಮೂಲಕ ಕಬಳಿಸಲಾಗಿದೆ. ಆ ಗ್ರಾಮಕ್ಕೆ ಸಂಬಂಧಿಸಿದವರ ಹೆಸರಿಗೆ ಜಮೀನು ಮಂಜೂರಾಗಿದ್ದು, ಜಮೀನು ಉಳುಮೆ ಮಾಡುವ ರೈತರಿಗೆ ಮಂಜೂರಾತಿ ಮಾಡಿಲ್ಲ ಎಂದು ಆರೋಪಿಸಿದರು. ಇಂತಹ ವಿಚಾರಗಳನ್ನು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ಪ್ರಶ್ನಿಸಬಾರದೇ? ಎಂದ ಅವರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸರ್ಕಾರಿ ಭೂಮಿ ಕಬಳಿಕೆ ಆಗುತ್ತಿದೆ ಎಂದು ಮಂಜುನಾಥ್ ಹೇಳಿದರು.

ರಾಜಕಾರಣಿಗಳ ಬೆಂಬಲಿಗ-ರಿಗೆ, ಬೇನಾಮಿದಾರರಿಗೆ ಈ ರೀತಿ ಜಮೀನು ಮಂಜೂರಾಗಿರುವ ನಿದರ್ಶನಗಳಿದ್ದು, ಸರ್ಕಾರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಅವರು ಒತ್ತಾಯಿಸಿದರು. ಹೋರಾಟದಿಂದ ಹಿಂದಕ್ಕೆ : ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬಿಡದಿ ಉಪನಗರ ಯೋಜನೆಗೆ ಅಧಿಸೂಚನೆ ಹೊರಡಿಸಲಾಗಿತ್ತು ಎಂಬ ದಾಖಲೆಯನ್ನು ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ ಅವರು ಒದಗಿಸಿದರೆ ಹೋರಾಟದಿಂದ ಹಿಂದೆ ಸರಿಯಲಾಗುವುದು ಎಂದು ಅವರು ಹೇಳಿದರು. ಕುಮಾರಸ್ವಾಮಿಯವರ ಅವಧಿಯಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು ಎಂದು ಆರೋಪಿಸುತ್ತಾರೆ.

ಪ್ರಾಥಮಿಕ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ ರೈತರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಯೋಜನೆಯನ್ನು ಕೈಬಿಡಲಾಗಿ-ತ್ತು. ಆದರೆ ಈ ಸರ್ಕಾರವೇ ಹಠಕ್ಕೆ ಬಿದ್ದು ಬಿಡದಿ ಉಪನಗರ ಯೋಜನೆಯನ್ನು ರೈತರ ವಿರೋಧದ ನಡುವೆ ಅನುಷ್ಠಾನಕ್ಕೆ ತರಲು ಮುಂದಾಗಿದೆ ಎಂದು ಆರೋಪಿಸಿದರು.ಸುದ್ದಿಗೋಷ್ಠಿಯಲ್ಲಿ ಜೆಡಿ-ಎಸ್ ಜಿಬಿಎ ಅಧ್ಯಕ್ಷ ಎಚ್.ಎಂ.ರಮೇಶ್‌ಗೌಡ, ರಾಜ್ಯ ವಕ್ತಾರ ದೇವರಾಜ್, ಮುಖಂಡರಾದ ಪ್ರದೀಪ್, ಮಹೇಶ್ ಉಪಸ್ಥಿತರಿದ್ದರು.

ಬ್ಯಾಂಕ್‌ಗಳಿಗೆ ಪ್ರತಿ ಶನಿವಾರ ರಜೆ ಘೋಷಣೆ ಕುರಿತ ನಕಲಿ ಅಧಿಸೂಚನೆ ವೈರಲ್

❑ ನ್ಯೈಜ್ಯ ದೆಸೆ ನ್ಯೂಸ್



ನವದೆಹಲಿ: ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಗೆ ಇನ್ನು ಮುಂದೆ ಎಲ್ಲ ಶನಿವಾರಗಳಂದು ಸಾರ್ವತ್ರಿಕ ರಜೆ ಘೋಷಿಸಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಗೆಜೆಟ್ ಅಧಿಸೂಚನೆ ನಕಲಿ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿರುವ ಪತ್ರಿಕಾ ಮಾಹಿತಿ ಬ್ಯೂರೋ (ಪಿಐಬಿ)ಯ ಫ್ಯಾಕ್ಟ್ ಚೆಕ್ ಘಟಕ, ಕೇಂದ್ರ ಹಣ-ಕಾಸು ಸಚಿವಾಲಯದಿಂದ ಇಂತಹ ಯಾವುದೇ ಅಧಿಸೂಚನೆ ಹೊರಡಿಸಲಾಗಿಲ್ಲ ಎಂದು ತಿಳಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಇಂತಹ ಮಾಹಿತಿಯನ್ನು ನಂಬುವ ಮುನ್ನ ಅಧಿಕೃತ ಮೂಲಗಳಿಂದ ಪರಿಶೀಲಿಸುವಂತೆ ಪಿಐಬಿ ನಾಗ-ರಿಕರಿಗೆ ಮನವಿ ಮಾಡಿದೆ.ಸೆಪ್ಟೆಂಬರ್ 30ರಂದು ಹಣಕಾಸು ಸಚಿವಾಲಯದ ಹಣಕಾಸು ಸೇವೆಗಳ ಇಲಾಖೆ ಆದೇಶ ಹೊರಡಿಸಿದೆ ಎಂದು ಸಾಮಾಜಿ-ಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಆದ-ರೆ ಇದು ಸತ್ಯಕ್ಕೆ ದೂರ ಎಂದು ಕೇಂದ್ರ ಸಾರ್ವಜನಿಕ ಸಂಪರ್ಕ ಸಚಿವಾಲಯ ತಿಳಿಸಿದೆ. ಈ ಬಗ್ಗೆ ದೇಶಾದ್ಯಂತ ಎಲ್ಲೆಡೆ ಚರ್ಚೆಗೆ ಗ್ರಾಸವಾಗಿದೆ.

ಸ್ಥಳೀಯ ವ್ಯಾಪಾರ ಮಾರ್ಗದರ್ಶಿ ಈ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯ ತುರ್ತು ಪತ್ರಿಕಾಗೋಷ್ಠಿ ನಡೆಸಿ ಮಾಹಿತಿಯನ್ನು ನೀಡಲಿದೆ ಎಂದು ತಿಳಿಸಿದೆ. ಈ ನಡುವೆ ಪಿಐಬಿ ಸಾಮಾಜಿಕ ಜಾಲತಾಣದಲ್ಲಿ ಇರುವ ಅಧಿಸೂಚನೆ ಸತ್ಯಕ್ಕೆ ದೂರ ಎಂದು ಹೇಳಿದೆ. ಬ್ಯಾಂಕ್ ಸಂಘಟನೆಗಳು ಇದನ್ನೇ ಪ್ರಮುಖ ಬೇಡಿಕೆಯನ್ನು ಮುಂದಿಟ್ಟು 3 ದಿನಗಳ ಮುಷ್ಕರಕ್ಕೆ ಮುಂದಾಗಿತ್ತು. ಆಗ ಕೇಂದ್ರದ ಪ್ರತಿನಿಧಿಗಳು ಬೇಡಿಕೆ ಈಡೇರಿಕೆ ಬಗ್ಗೆ ಭರವಸೆ ನೀಡಿದ್ದರು. ಬ್ಯಾಂಕ್ ವೇಳಾಪಟ್ಟಿಯನ್ನು ಪರೀಕ್ಷರಣೆ ಹಾಗೂ ವೇತನ ಹೆಚ್ಚಳಕ್ಕೆ ಸಮತಿ ಸೂಚಿಸಲಾಗಿತ್ತು. ಇಂದು ಈ ವಿಷಯವನ್ನು ರಾಷ್ಟ್ರೀಯ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಸಾರ ಮಾಡಲಾಗಿತ್ತು.

ಶಾಂತಿ ಪುರುಷನ ಜೀವನ ಪಯಣ – ಲಾಲ್ ಬಹದ್ದೂರ್ ಶಾಸ್ತ್ರಿ


❑ ನ್ಯೈಜ್ಯ ದೆಸೆ ವಿಶೇಷ

ನಮ್ಮ ಈ ವಿಶಾಲ ದೇಶದಲ್ಲಿ, ಜನರು ವಿಭಿನ್ನ ಧರ್ಮಗಳನ್ನು ಪ್ರತಿಪಾದಿಸುತ್ತಾರೆ, ವಿಭಿನ್ನ ಭಾಷೆಗಳನ್ನು ಮಾತನಾಡುತ್ತಾರೆ, ವಿಭಿನ್ನವಾಗಿ ಉಡುಗೆ ತೊಡುತ್ತಾರೆ ಮತ್ತು ವಿಭಿನ್ನ ಪದ್ಧತಿಗಳನ್ನು ಪಾಲಿಸುತ್ತಾರೆ; ಆದರೆ ನಾವು ಒಂದೇ ರಾಷ್ಟ್ರ; ನಮ್ಮ ಸ್ವಾತಂತ್ರ್ಯ ಹೋರಾಟದ ಇತಿಹಾಸ ಮತ್ತು ನಮ್ಮ ಭವಿಷ್ಯದ ಅಭಿವೃದ್ಧಿಯಲ್ಲಿ ನಮ್ಮ ನಂಬಿಕೆ ನಮ್ಮ ಸಾಮಾನ್ಯ ಬಂಧಗಳಾಗಿವೆ."

– ಲಾಲ್ ಬಹದ್ದೂರ್ ಶಾಸ್ತ್ರಿ

ಭಾರತದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರು ಅವರ ಹಠಾತ್ ನಿಧನದ ನಂತರ, ಬಲವಾದ ನಿರ್ಣಯಗಳನ್ನು ಹೊಂದಿದ್ದ ಮೃದುಭಾಷಿ ವ್ಯಕ್ತಿ ಭಾರತವನ್ನು ಕಷ್ಟದ ಸಮಯದಲ್ಲಿ ಮುನ್ನಡೆಸುವ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡರು. ಈ ವ್ಯಕ್ತಿ ಭಾರತದ ಎರಡನೇ ಪ್ರಧಾನಿ – ಲಾಲ್ ಬಹದ್ದೂರ್ ಶಾಸ್ತ್ರಿ. ಪರಿಸ್ಥಿತಿ ಎಷ್ಟೇ ಕಠೋರವಾಗಿ ಕಂಡರೂ, ಹಸಿರು ಮತ್ತು ಶ್ವೇತ ಕ್ರಾಂತಿಗಳಂತೆ ಪರಿಸ್ಥಿತಿಯನ್ನು ನಿಭಾಯಿಸಲು ಅವರು ಕೆಲವು ಮಾರ್ಗಗಳನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾದರು.

ಆರಂಭಿ ಕಜೀವನ ಎರಡನೇ ವಿಶಿಷ್ಟ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ 1904 ರ ಅಕ್ಟೋಬರ್ 2 ರಂದು ಬ್ರಿಟಿಷ್ ಭಾರತದ ಆಗ್ರಾ ಮತ್ತು ಔಧ್‌ನ ಸಂಂ-ಋಕ್ತ ಪ್ರಾಂತ್ಯಗಳಲ್ಲಿರುವ ಮುಘಲ್‌ಸರೈನಲ್ಲಿ ಜನಿಸಿದರು. ಅವರು ತಮ್ಮ ಜನ್ಮದಿನವನ್ನು ಮಹಾತ್ಮ ಗಾಂಧಿಯವರೊಂದಿಗೆ ಹಂಚಿಕೊಂಡರು. ಅಲಹಾಬಾದ್‌ನ ಕಂದಾಯ ಕಚೇರಿಯಲ್ಲಿ ಗುಮಾಸ್ತರಾಗಿದ್ದ ಅವರ ತಂದೆ ಶಾರದಾ ಪ್ರಸಾದ್ ಶ್ರೀವಾಸ್ತವ ಅವರು ಬಾಲ್ಯದಲ್ಲಿಯೇ ನಿಧನರಾದರು. ಪರಿಣಾಮವಾಗಿ, ಅವರ ತಾಯಿ ರಾಮದುಲಾರಿ ದೇವಿ ಅವರನ್ನು ಮತ್ತು ಅವರ ಸಹೋದರಿಯರನ್ನು ಅವರ ತಾಯಿಯ ಅಜ್ಜ ಮುನ್ಶಿ ಹಜಾರಿ ಲಾಲ್ ಅವರ ಮನೆಗೆ ಕರೆದೊಯ್ದರು, ಅಲ್ಲಿ ಅವರ ತಂದೆಯ ಮರಣದ ನಂತರ ಅವರನ್ನು ಬೆಳೆಸಲಾಯಿತು. ಅವರ ತಾಯಿ ಸಾಲ ಮಾಡುವ ಮೂಲಕ ಅವರ ಶಾಲಾ ಶಿಕ್ಷಣವನ್ನು ನೋಡಿಕೊಂಡರು.



ಕಾಯಸ್ಥ ಕುಟುಂಬದಲ್ಲಿ ಜನಿಸಿದ ಅವರಿಗೆ ಉರ್ದು ಭಾಷೆ ಮತ್ತು ಸಂಸ್ಕೃತಿಯಲ್ಲಿ ಶಿಕ್ಷಣ ನೀಡುವುದು ವಾಡಿಕೆಯಾಗಿತ್ತು. ಪ್ರೌಢಶಾಲಾ ಶಿಕ್ಷಣಕ್ಕಾಗಿ ಅವರನ್ನು ವಾರಣಾಸಿಯಲ್ಲಿರುವ ಅವರ ಚಿಕ್ಕಪ್ಪನ ಮನೆಗೆ ಕಳುಹಿಸಲಾಯಿತು. ಅವರ ಬಾಲ್ಯದ ಬಡತನದ ಆರಂಭಿಕ ದಿನಗಳಲ್ಲಿ ಅವರು ಅನೇಕ ಸವಾಲುಗಳನ್ನು ಎದುರಿಸಿದರು. ಬೇಸಿಗೆಯ ಸುಡುವ ಸಮಯದಲ್ಲೂ ಅವರು ಮನೆಯಿಂದ ಮೈಲುಗಳಷ್ಟು ದೂರದಲ್ಲಿರುವ ಶಾಲೆಗೆ ಪಾದರಕ್ಷೆಗಳಿಲ್ಲದೆ ನಡೆದುಕೊಂಡು ಹೋಗುತ್ತಿದ್ದರು. ಧೈರ್ಯ, ತಾಳ್ಮೆ, ಸ್ವಯಂ ನಿಯಂತ್ರಣ, ಸೌಜನ್ಯ ಮತ್ತು ನಿಸ್ವಾರ್ಥತೆಯಂತಹ ಸದ್ಗುಣಗಳನ್ನು ಅವರು ಬಾಲ್ಯದಲ್ಲಿಯೇ ಸಂಪಾದಿಸಿಕೊಂಡರು. ಅವರು ಎಂದಿಗೂ ಜಾತಿ ವ್ಯವಸ್ಥೆಯ ಪರವಾಗಿರಲಿಲ್ಲ ಆದ್ದರಿಂದ ಅವರು ತಮ್ಮ ಉಪನಾಮ "ಶ್ರೀವಾಸ್ತವ" ವನ್ನು ಕೈಬಿಟ್ಟರು. ಶಾಸ್ತ್ರಿಯವರು ಹರೀಶ್ ಚಂದ್ರ ಪ್ರೌಢಶಾಲೆಯಲ್ಲಿ ನಿಷ್ಕಾಮೇಶ್ವರ ಪ್ರಸಾದ್ ಮಿಶ್ರಾ ಅವರಿಂದ ಪ್ರೇರಿತರಾದರು ಮತ್ತು ಅವರು ಮಹಾತ್ಮ ಗಾಂಧಿ, ಆನಿ ಬೆಸೆಂಟ್ ಮತ್ತು ಸ್ವಾಮಿ ವಿವೇಕಾನಂದರ ಕೃತಿಗಳನ್ನು ಅನ್ವೇಷಿಸಲು ಪ್ರಾರಂಭಿಸಿದರು. ಅಸಹಕಾರ ಚಳವಳಿಗೆ ಸೇರಲು ಮಹಾತ್ಮಾ ಗಾಂಧಿಯವರ ಕರೆಯಿಂದಾಗಿ ಅವರು ತಮ್ಮ ಶಾಲೆಯಿಂದ ಹಿಂದೆ ಸರಿದರು.

ಮೊದಲ ಬಾರಿಗೆ, ಅವರು 17 ವರ್ಷದವರಾಗಿದ್ದಾಗ ಜೈಲಿಗೆ ಹೋದರು. ಅವರು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಪೂರ್ಣ ಹೃದಯದಿಂದ ಭಾಗವಹಿಸಿದರು ಮತ್ತು ಇದರಿಂದಾಗಿ ಅವರು ಇತರ ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಅನೇಕ ಸಂದರ್ಭಗಳಲ್ಲಿ ಬಂಧನಕ್ಕೊಳಗಾದರು. 1926 ರಲ್ಲಿ, ವಾರಣಾಸಿಯ ಕಾಶಿ ವಿದ್ಯಾಪೀಠದಿಂದ ಪದವಿ ಪಡೆದ ನಂತರ ಅವರಿಗೆ "ಶಾಸ್ತ್ರಿ" (ವಿದ್ವಾಂಸ) ಎಂಬ ಬಿರುದನ್ನು ನೀಡಲಾಯಿತು. ಅಲ್ಲಿ ಅವರು ಅನೇಕ ಬುದ್ಧಿಜೀವಿಗಳು ಮತ್ತು ರಾಷ್ಟ್ರೀಯವಾದಿಗಳಿಂದ ಪ್ರಭಾವಿತರಾದರು. 1928 ರಲ್ಲಿ, ಅವರು ಮಿರ್ಜಾಪುರದ ಶ್ರೀಮತಿ ಲಲಿತಾ ದೇವಿಯನ್ನು ವಿವಾಹವಾದರು. ಅವರು ವರದಕ್ಷಿಣೆ ವ್ಯವಸ್ಥೆಯನ್ನು ವಿರೋಧಿಸಿದ್ದರು, ಆದರೆ ಲಲಿತಾ ದೇವಿಯ ತಂದೆಯ ನಿರಂತರ ಒತ್ತಾಯದ ಮೇರೆಗೆ, ಅವರು ಕೇವಲ ಐದು ಗಜ ಖಾದಿಯನ್ನು ಮಾತ್ರ ಸ್ವೀಕ-ರಿಸಿದರು. ದಂಪತಿಗೆ 6 ಮಕ್ಕಳಿದ್ದರು.

ಶಾಸ್ತ್ರೀಜಿಯವರ ಸ್ವಾತಂತ್ರ್ಯಪೂರ್ವದ ಪಾತ್ರ ಶಾಸ್ತ್ರಿಜಿ ಅವರು ಲಾಲಾ ಲಜಪತ್ ರಾಯ್ ಸ್ಥಾಪಿಸಿದ ಜನರ ಸೇವಕರ ಸಮಾಜದ ಅಧ್ಯಕ್ಷರಾದರು, ಇದು ಹರಿಜನರ ಉನ್ನತಿಗಾಗಿ ಕೆಲಸ ಮಾಡಿತು. 1928 ರಲ್ಲಿ, ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸಕ್ರಿಯ ಸದಸ್ಯರಾಗಿ ಸೇರಿದರು. 1930 ರಲ್ಲಿ, ಅವರಿಗೆ ಅಲಹಾಬಾದ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನವನ್ನು ನೀಡಲಾಯಿತು. ಸರ್ಕಾರಕ್ಕೆ ಭೂ ಲಾಭ ಮತ್ತು ತೆರಿಗೆಗಳನ್ನು ಪಾವತಿಸುವುದನ್ನು ವಿರೋಧಿಸಲು ಜನರನ್ನು ಪ್ರೋತ್ಸಾಹಿಸಲು ಅವರು ನಾಗರಿಕ ಅಸಹಕಾರ ಚಳವಳಿಯಲ್ಲಿಯೂ ಭಾಗವಹಿಸಿದರು. ಗಾಂಧಿಯವರ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಅವರು ಮನೆ-ಮನೆಗೆ ಅಭಿಯಾನವನ್ನು ನಿರ್ದೇಶಿಸಿದರು. ಇದಲ್ಲದೆ, 1937 ರಲ್ಲಿ, ಅವರು ಯುಪಿ ಶಾಸಕಾಂಗ ಸಭೆಗೆ ಆಯ್ಕೆಯಾದರು. 1937 ರಲ್ಲಿ ಅವರು ಯುಪಿ ಸಂಸದೀಯ ಮಂಡಳಿಯ ಸಂಘಟನಾ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು.

1942 ರಲ್ಲಿ ಶಾಸ್ತ್ರಿ ಜೈಲಿನಲ್ಲಿದ್ದಾಗ, ಅವರು ಸಮಾಜ ಸುಧಾರಕರು ಮತ್ತು ಪಾಶ್ಚಿಮಾತ್ಯ ತತ್ವಜ್ಞಾನಿಗಳ ಪುಸ್ತಕಗಳನ್ನು ಓದಲು ತಮ್ಮ ಸಮಯವನ್ನು ಬಳಸಿಕೊಂಡರು. ಕ್ವಿಟ್ ಇಂಡಿಂ-ಋಾ ಚಳವಳಿಯ ಸಮಯದಲ್ಲಿ ಜೈಲಿನಿಂದ ಬಿಡುಗಡೆಯಾದ ನಂತರ ಒಂದು ವಾರದವರೆಗೆ ಅವರು ಸ್ವಾತಂತ್ರ್ಯ ಕಾರ್ಯಕರ್ತರಿಗೆ ಸೂಚನೆಗಳನ್ನು ಕಳುಹಿಸಿದರು. ಶಾಸ್ತ್ರೀಜಿಯವರ ಸ್ವಾತಂತ್ರ್ಯೋತ್ತರ ಪಾತ್ರ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ, ಶಾಸ್ತ್ರಿಜಿ ದೇಶದ ಅಭಿವೃದ್ಧಿಗಾಗಿ ಮತ್ತು ಭಾರತವನ್ನು ಒಗ್ಗಟ್ಟಿನಿಂದ ಇರಿಸಲು ಬಹಳಷ್ಟು ಶ್ರಮಿಸಿದರು. 1946 ರಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದಾಗ, ಅವರನ್ನು ರಚನಾತ್ಮಕ ಪಾತ್ರ ವಹಿಸಲು ಆಹ್ವಾನಿಸಲಾಯಿತು.


1951 ರಲ್ಲಿ, ಅವರನ್ನು 'ಅಖಿಲ ಭಾರತ-ರಾಷ್ಟ್ರೀಯ-ಕಾಂಗ್ರೆಸ್' ನ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಯಿತು. 1952, 1957 ಮತ್ತು 1962 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಉತ್ತರ ಪ್ರದೇಶದ ಸಂಸದೀಯ ಕಾರ್ಯದರ್ಶಿ ಸ್ಥಾನದಿಂದ, ಅವರು ಗೃಹ ಸಚಿವ ಸ್ಥಾನಕ್ಕೆ ಏರಿದರು. ನೆಹರು ಅನಾರೋಗ್ಯದಿಂದ ಬಳಲುತ್ತಿದ್ದಾಗ, ಅವರನ್ನು ಖಾತೆಯಿಲ್ಲದ ಸಚಿವರನ್ನಾಗಿ ಮಾಡಲಾಯಿತು.

ಶಾಸ್ತ್ರಿಜಿ ಅವರನ್ನು ಮೇ 23, 1952 ರಂದು ಕೇಂದ್ರ ಸರ್ಕಾರದಲ್ಲಿ ರೈಲ್ವೆ ಸಚಿವರನ್ನಾಗಿ ಘೋಷಿಸಲಾಯಿತು. ಅವರು ಸಮಾಜದ ದುರ್ಬಲ ವರ್ಗಗಳಿಗಾಗಿ ಮೂರನೇ ದರ್ಜೆಯ ರೈಲ್ವೆಯನ್ನು ಪ್ರಾರಂಭಿಸಿದರು. ಆದಾಗ್ಯೂ, ಒಂದು ರೈಲು ಅಪಘಾತ ಸಂಭವಿಸಿ ಸಾವುನೋವು ಸಂಭವಿಸಿತು ಮತ್ತು ಪರಿಣಾಮವಾಗಿ, ಅವರು ನೈತಿಕ ಆಧಾರದ ಮೇಲೆ ಆ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಗೋವಿಂದ ವಲ್ಲಭ ಪಂತ್ ಅವರ ಅಡಿಯಲ್ಲಿ ಪೊಲೀಸ್ ಸಚಿವರಾಗಿ ಅವರು ಶ್ರಮಿಸಿದರು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಂಡ ಅವರು, ಗುಂಪನ್ನು ಚದು-ರಿಸಲು ನೀರನ್ನು ಬಳಸಬೇಕು, ಜನಸಮೂಹದ ಮೇಲೆ ಲಾಠಿ ಪ್ರಹಾರ ಮಾಡಬಾರದು ಎಂದು ತಮ್ಮ ಪೊಲೀಸ್ ಇಲಾಖೆಗೆ ಸೂಚಿಸಿದರು. 1947 ರಲ್ಲಿ, ಅವರು ಗಲಭೆಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದರು. ಒಟ್ಟಾರೆಯಾಗಿ, ಅವರು ರಾಜ್ಯ ಪೊಲೀಸ್ ಸಚಿವರಾಗಿ ಯಶಸ್ವಿ ಅಧಿಕಾರಾವಧಿಯನ್ನು ಹೊಂದಿದ್ದರು ಎಂದು ಹೇಳಬಹುದು. 1965 ರಲ್ಲಿ ಪಾಕಿಸ್ತಾನ ಭಾರತದ ಮೇಲೆ ಆಕ್ರಮಣ ಮಾಡಿದಾಗ, ಪ್ರತಿಕೂಲ ಪರಿಸ್ಥಿತಿಯಲ್ಲೂ ಅವರು ಕಾರ್ಯಾಚರಣೆಯನ್ನು ಉತ್ತಮವಾಗಿ ನಿರ್ವಹಿಸಿದರು. ಅದೇ ವರ್ಷ, ಭಾರತ ಆಹಾರ ಬಿಕ್ಕಟ್ಟಿನ ಸಮಸ್ಯೆಯನ್ನು ಎದು-ರಿಸಿತು. ಭಾರತೀಯರನ್ನು ಸಜ್ಜುಗೊಳಿಸಲು ಶಾಸ್ತ್ರಿಜಿ "ಜೈ ಜವಾನ್ ಮತ್ತು ಜೈ ಕಿಸಾನ್" ಎಂಬ ಘೋಷಣೆಯನ್ನು ನೀಡಿದರು. ಪ್ರಾಮಾಣಿಕತೆ ಮತ್ತು ಕಠಿಣ ಪರಿಶ್ರಮಕ್ಕೆ ಹೆಸರುವಾಸಿಯಾದ ಅವರು 18 ತಿಂಗಳುಗಳ ಕಾಲ ಪ್ರಧಾನ ಮಂತ್ರಿ ಸ್ಥಾನವನ್ನು ಅಲಂಕರಿಸಿದರು.

ಲಾಲ್ ಬಹದ್ದೂರ್ ಶಾಸ್ತ್ರಿಯವರ ಸಾಧನೆಗಳು ಶಾಸ್ತ್ರಿಜಿಯವರು ಸದಾ ಸ್ಮರಣೀಯರಾಗುವ ಎರಡು ಚಳುವಳಿಗಳೆಂದರೆ ಹಸಿರು ಕ್ರಾಂತಿ ಮತ್ತು ಶ್ವೇತ ಕ್ರಾಂತಿ, ಏಕೆಂದರೆ ಅವರು ಜನಸಾಮಾನ್ಯರು ಸ್ವಾವಲಂಬಿಗಳಾಗಲು ಪ್ರೋತ್ಸಾಹಿಸಿದರು. ಹಸಿರು ಕ್ರಾಂತಿಯ ಪ್ರಮುಖ ಉದ್ದೇಶ ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವುದು, ವಿಶೇಷವಾಗಿ ಗೋಧಿ ಮತ್ತು ಅಕ್ಕಿ ಕೃಷಿ. ಹಸಿರು ಕ್ರಾಂತಿಯನ್ನು ಮೊದಲು 1966–67ರಲ್ಲಿ ಪಂಜಾಬ್‌ನಲ್ಲಿ ಪರಿಚಯಿಸಲಾಯಿತು ಮತ್ತು ಆ ಮೂಲಕ ದೇಶದ ಇತರ ಭಾಗಗಳಿಗೆ ಹರಡಿತು. ದೇಶದಲ್ಲಿ ಹಾಲಿನ ಉತ್ಪಾದನೆ ಮತ್ತು ಪೂರೈಕೆಯಲ್ಲಿ ಹೆಚ್ಚಳವಾಗಬೇಕೆಂದು ಶಾಸ್ತ್ರಿಜಿ ಇತರ ಕೆಲವರೊಂದಿಗೆ ಸೇರಿ ಶ್ವೇತ ಕ್ರಾಂತಿಯನ್ನು ಉತ್ತೇಜಿಸಿದರು. ಇದರ ಪರಿಣಾಮವಾಗಿ, ಅವರು ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಯನ್ನು ರಚಿಸಿದರು. ಗುಜರಾತ್‌ನ ಆನಂದ್‌ನ ಅಮುಲ್ ಹಾಲು ಸಹಕಾರ ಸಂಘವನ್ನು ಸಹ ಅವರು ಬೆಂಬಲಿಸಿದರು.

ನವೆಂಬರ್ 19, 1964 ರಂದು, ಅವರು ಪ್ರತಿಷ್ಠಿತ ಲಕ್ನೋ ಶಾಲೆಯಾದ ಬಾಲ ವಿದ್ಯಾ ಮಂದಿರಕ್ಕೆ ಅಡಿಪಾಯ ಹಾಕಿದರು. ಅದೇ ತಿಂಗಳಲ್ಲಿ, ಚೆನ್ನೈನ ಥರಾಮಣಿಯಲ್ಲಿರುವ ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕ್ಯಾಂಪಸ್ ಮತ್ತು ಚೆನ್ನೈ ಪೋರ್ಟ್ ಟ್ರಸ್ಟ್‌ನ ಜವಾಹರ್ ಡಾಕ್ ಅನ್ನು ಅವರು ಉದ್ಘಾಟಿಸಿದರು. ಗುಜರಾತ್ ರಾಜ್ಯದಲ್ಲಿ ಬಾಲಚಾಡಿಯ ಸೈನಿಕ ಶಾಲೆಯನ್ನು ತೆರೆಯಲಾಯಿತು. ಟ್ರೊಂಬೆಯಲ್ಲಿ ಪ್ಲುಟೋನಿಯಂ ಮರು ಸಂಸ್ಕರಣಾ ಘಟಕವನ್ನು 1965 ರಲ್ಲಿ ತೆರೆಯಲಾಯಿತು. ಡಾ. ಹೋಮಿ ಜಹಾಂಗೀರ್ ಭಾಭಾ ಪರಮಾಣು ಸ್ಫೋಟಕಗಳ ಅಭಿವೃದ್ಧಿಯನ್ನು ಸೂಚಿಸಿದರು, ಇದನ್ನು ಶಾಸ್ತ್ರಿಜಿ ಅನುಮೋದಿಸಿದರು. ಆಲಮಟ್ಟಿ ಅಣೆಕಟ್ಟಿನ ಅಡಿಪಾಯವನ್ನು ಸಹ ಅವರೇ ಹಾಕಿದರು.



ಮರಣೋತ್ತರವಾಗಿ, ಅವರಿಗೆ ಭಾರತ ರತ್ನವನ್ನು ಸಹ ನೀಡಲಾಯಿತು. ಅವರು ಪ್ರಧಾನ ಮಂತ್ರಿಯಾಗಿ ವಾಸಿಸಿದ್ದ ಲಾಲ್ ಬಹದ್ದೂರ್ ಶಾಸ್ತ್ರಿ ಸ್ಮಾರಕವನ್ನು (10 ಜನಪಥ್ ಪಕ್ಕದಲ್ಲಿದೆ) ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನಡೆಸುತ್ತಿದೆ. ಶಾಸ್ತ್ರಿಯವರ ನಿಗೂಢ ಸಾವು ಪಾಕಿಸ್ತಾನದ ಅಧ್ಯಕ್ಷ ಅಯೂಬ್ ಖಾನ್ ಜನವರಿ 10, 1966 ರಂದು ತಾಷ್ಕೆಂಟ್ ಒಪ್ಪಂದಕ್ಕೆ (ಶಾಂತಿ ಒಪ್ಪಂದ) ಸಹಿ ಹಾಕಿದರು. ಇದು ಭಾರತ ಮತ್ತು ಪಾಕಿಸ್ತಾನದ ನಡುವಿನ 17 ದಿನಗಳ ಯುದ್ಧವನ್ನು ಕೊನೆಗೊಳಿಸಿತು. ತೀವ್ರ ಒತ್ತಡದಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಆದಾಗ್ಯೂ, ಮರುದಿನವೇ ಶಾಸ್ತ್ರಿಜಿ ನಿಧನರಾದರು. ಅವರ ಸಾವಿಗೆ ಹೃದಯಾಘಾತವೇ ಕಾರಣ ಎಂದು ವೈದ್ಯರು ಬಹಿರಂಗಪಡಿಸಿದರು ಆದರೆ ಅವರ ಪತ್ನಿಯ ಅಭಿಪ್ರಾಯ ಬೇರೆಯಾಗಿತ್ತು. ಅವರ ಪ್ರಕಾರ, ಶಾಸ್ತ್ರಿ-ಜಿಗೆ ವಿಷಪ್ರಾಶನವಾಗಿತ್ತು. ಶಾಸ್ತ್ರಿಜಿಯನ್ನು ಕೊಂದ ಶಂಕಿತನನ್ನು ಬಂಧಿಸಲಾಯಿತು ಮತ್ತು ವೈದ್ಯರು ಹೃದಯಾಘಾತವನ್ನು ಅವರ ಸಾವಿಗೆ ಕಾರಣವೆಂದು ಪ್ರಮಾಣೀಕರಿಸಿದ ನಂತರ ಶೀಘ್ರದಲ್ಲೇ ಬಿಡುಗಡೆ ಮಾಡಲಾಯಿತು. ಅವರ ಸಾವು ಇತಿಹಾಸದಲ್ಲಿ ನಿಗೂಢಗಳಲ್ಲಿ ಒಂದಾಗಿ ಉಳಿಯಿತು.

ತೀರ್ಮಾನ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಗೌರವಾರ್ಥವಾಗಿ ದೆಹಲಿಯಲ್ಲಿ 'ವಿಜಯ್ ಘಾಟ್' ಸ್ಥಾಪಿಸಲಾಗಿದೆ. ಪ್ರಧಾನ ಮಂತ್ರಿಯಾಗಿದ್ದ ಅಲ್ಪಾವಧಿಯಲ್ಲಿಯೇ, ಶಾಸ್ತ್ರಿಜಿ ಭಾರತವನ್ನು ಅನೇಕ ಕಠಿಣ ಪರಿಸ್ಥಿತಿಗಳಿಂದ ಹೊರತರುವಲ್ಲಿ ಯಶಸ್ವಿಯಾದರು. ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಒಬ್ಬ ಮಹಾನ್ ನಾಯಕ, ಮಹಾನ್ ಸಮಗ್ರತೆ ಮತ್ತು ಸಾಮರ್ಥ್ಯದ ವ್ಯಕ್ತಿ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಸತ್ಯ, ನಮ್ರತೆ ಮತ್ತು ಉತ್ಸಾಹ ಅವರ ಗುಣಗಳನ್ನು ಪಾಲಿಸಬೇಕು. ದೂರದೃಷ್ಟಿಯ ವ್ಯಕ್ತಿಯಾಗಿ, ಅವರು ದೇಶವನ್ನು ಪ್ರಗತಿಯತ್ತ ಕೊಂಡೊಯ್ದರು. ಅವರ ಗೌರವಾರ್ಥ-ವಾಗಿ, ದೆಹಲಿಯಲ್ಲಿ 'ವಿಜಯ್ ಘಾಟ್' ಎಂಬ ಸ್ಮಾರಕವನ್ನು ಸ್ಥಾಪಿಸಲಾಯಿತು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101